# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಮೇ 13, 2021

ಸಂಪುಟ : 47 ಸಂಚಿಕೆ : 360 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


# 18ರ ಲಸಿಕೆಗೆ ರಾಜ್ಯದಲ್ಲಿ ತಡೆ



## ಪಾಲಿಕೆಯಿಂದ ಜಿಲ್ಲಾಸ್ಪತ್ರೆಗೆ ವಾಟರ್ ಡಿಸ್ಪೆನ್ಸರ್

ದಾವಣಗೆರೆ, ಮೇ 12- ನಗರ ಪಾಲಿಕೆ ವತಿಯಿಂದ ಕೋವಿಡ್ ರೋಗಿಗಳ ಅನುಕೂಲಕ್ಕಾಗಿ ಒಟ್ಟು 22 ಬ್ಲೂಸ್ಟಾರ್ ಹಾಟ್ ಅಂಡ್ ಕೋಲ್ಡ್ ವಾಟರ್ ಡಿಸ್‌ಪೆನ್ಸರ್‌ಗಳನ್ನು ಜಿಲ್ಲಾಡಳಿತಕ್ಕೆ ಇಂದು ನೀಡಲಾಯಿತು.

ಜಿಲ್ಲಾಸ್ಪತ್ರೆಯಲ್ಲಿ ಸಂಜೆ ಸಂಸದ ಡಾ. ಜಿ.ಎಂ. ಸಿದ್ದೇಶ್ವರ ನೇತೃತ್ವದಲ್ಲಿ ನಗರ ಪಾಲಿಕೆ ಮಹಾಪೌರ ಎಸ್.ಟಿ. ವೀರೇಶ್ ಅವರು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಹಸ್ತಾಂತರಿಸಿದರು.

ಈ ವೇಳೆ ಸಂಸದ ಸಿದ್ದೇಶ್ವರ ಮಾತನಾಡಿ, ಕೋವಿಡ್ ಸೋಂಕಿತರಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ನಗರ ಪಾಲಿಕೆ ವತಿಯಿಂದ ರೂ.9 ಸಾವಿರ ಮೌಲ್ಯದ ಒಟ್ಟು 22 ಬ್ಲೂಸ್ಟಾರ್ ಹಾಟ್ ಅಂಡ್ ಕೋಲ್ಡ್ ವಾಟರ್ ಡಿಸ್‌ಪೆನ್ಸರ್ ಗಳನ್ನು ನೀಡಿರುವುದು ಶ್ಲಾಘನೀಯವೆಂದರು.

**ಆಕ್ಸಿಜನ್ ಕಾನ್ಸಂಟ್ರೇಟರ್ ಖರೀದಿ 50 ಲಕ್ಷ:** ಜಿಲ್ಲಾಸ್ಪತ್ರೆಗೆ 20 ಮತ್ತು ಇಎಸ್ಐ ಆಸ್ಪತ್ರೆಗೆ 2 ಡಿಸ್‌ಪೆನ್ಸರ್ ಗಳನ್ನು ನೀಡಿದ್ದಾರೆ. ಜಿಲ್ಲೆಯಲ್ಲಿ ಆಕ್ಸಿಜನ್ ಕೊರತೆಯಿರುವುದರಿಂದ ಆಕ್ಸಿಜನ್ ಕಾನ್ಸಂಟ್ರೇಟರ್ ಖರೀದಿಸಲು ನಗರ ಪಾಲಿಕೆಯಿಂದ 50 ಲಕ್ಷ ಪಡೆಯ ಲಾಗಿದ್ದು, ಮುಂದಿನ ದಿನಗಳಲ್ಲಿ ದಾನಿಗಳು ಸಹಾಯಹಸ್ತ ನೀಡಲು ಮುಂದೆ ಬಂದರೆ ಮತ್ತಷ್ಟು ಆಕ್ಸಿಜನ್ ಕಾನ್ಸನ್‌ಟ್ರೇಟರ್ ಗಳನ್ನು ಖರೀದಿಸುತ್ತೇವೆಂದರು.

ನಗರಪಾಲಿಕೆ ಮಹಾಪೌರ ಎಸ್.ಟಿ. ವೀರೇಶ್ ಮಾತನಾಡಿ, ತಾವು ಚಿಗಟೇರಿ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡುತ್ತಿದ್ದು, ಇಲ್ಲಿರುವ ವೈದ್ಯರು, ಸಿಬ್ಬಂದಿಗಳ ಸಲಹೆಗಳ ಮೇರೆಗೆ ಹಾಗೂ ರೋಗಿಗಳಿಗೆ ಅನುಕೂಲವಾಗುವ (2ನೇ ಪುಟಕ್ಕೆ)



**45 ವರ್ಷದವರಿಗೆ ಹಾಗೂ ಎರಡನೇ ಡೋಸ್ ನೀಡಲು ಆದ್ಯತೆ**

ಬೆಂಗಳೂರು, ಮೇ 12 – ಕೊರೊನಾ ಲಸಿಕೆಯ ತೀವ್ರ ಕೊರತೆ ಎದುರಿಸುತ್ತಿರುವ ರಾಜ್ಯ ಸರ್ಕಾರ, 18-44 ವಯೋಮಾನದವರಿಗೆ ಲಸಿಕೆ ನೀಡುವುದನ್ನು ನಿಲ್ಲಿಸಲು ನಿರ್ಧರಿಸಿದೆ. ಮೇ 1ರಿಂದ ಸಾಂಕೇತಿಕವಾಗಿ ಲಸಿಕೆ ನೀಡುವ ಕಾರ್ಯಕ್ರಮ ಆರಂಭಿಸಲಾಗಿತ್ತು.

ಈ ವಯೋಮಾನದವರಿಗಾಗಿ ತರಿಸಲಾದ ಲಸಿಕೆಗ ಳನ್ನು ಎರಡನೇ ಡೋಸ್ ನೀಡಲು ಬಳಸಿಕೊಳ್ಳಲಾಗುವುದು ಎಂದು ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರಾಜ್ಯ ಸರ್ಕಾರ 18-44ರ ವಯೋಮಾನದ ವರಿಗಾಗಿ ಲಸಿಕೆ ಖರೀದಿಸಿತ್ತು. ನಾವು ಈಗಾಗಲೇ ಎರಡು ಲಸಿಕೆ ಉತ್ಪಾದಕರಿಗೆ 3 ಕೋಟಿ ಡೋಸ್ ಖರೀದಿಗೆ ಹಣ ಪಾವತಿಸಿದ್ದೇವೆ. ಇದರಲ್ಲಿ ಏಳು ಲಕ್ಷ ರಾಜ್ಯಕ್ಕೆ ದೊರೆತಿದೆ ಎಂದು ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ತಿಳಿಸಿದ್ದಾರೆ. ಲಸಿಕೆಗಳು ಬರುತ್ತಾ ಹೋದಂತೆ ಸರ್ಕಾರ ಜನರಿಗೆ ನೀಡಲಿದೆ. ಕೇವಲ ಇಬ್ಬರು ಉತ್ಪಾದಕರಿರುವ ಕಾರಣ ನಮಗೆ ಸಮರ್ಪಕ ಲಸಿಕೆ ಸಿಗುತ್ತಿಲ್ಲ. ನಾವು ಲಸಿಕೆ ಆಮದಿಗೆ ಆದೇಶ ಹೊರಡಿಸುತ್ತೇವೆ ಎಂದವರು ಹೇಳಿದ್ದಾರೆ.

ಭಾರತದಿಂದ ಹೊರಗೆ ಉತ್ಪಾದಿಸುವ ಒಂದು ಲಸಿಕೆಗೆ ಮಾತ್ರ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಇತರೆ ಲಸಿಕೆಗಳಿಗೆ ಅನುಮತಿ ನೀಡಿದರೆ ಬೇರೆ ಲಸಿಕೆಗಳನ್ನೂ ತರಿಸಲಾಗುವುದು ಎಂದವರು ಹೇಳಿದ್ದಾರೆ. ಲಸಿಕೆ ಕೊರತೆ ರಾಜ್ಯಾದ್ಯಂತ ಉಲ್ಬಣಿಸಿದ್ದು, ಲಸಿಕಾ ಕೇಂದ್ರಗಳಲ್ಲಿ ಜನರು ಸಾಲುಗಟ್ಟಿ ನಿಂತು ಪರಿತಪಿಸುವುದು ಕಂಡು ಬರುತ್ತಿದೆ.

ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಅಧಿಕಾರಿಗಳ ಸಭೆ ಕರೆದು, ಆದಷ್ಟು ಶೀಘ್ರ ಸಮಸ್ಯೆಗಳನ್ನು ಬಗೆಹರಿಸುವಂತೆ ತಿಳಿಸಿದ್ದಾರೆ. ಈ ನಡುವೆ ಹೇಳಿಕೆ ನೀಡಿರುವ ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಹಾಗೂ ಗೃಹ ಸಚಿವ ಬಸವರಾಜ ಬೊಮ್ಮಾಯಿ, ಸರ್ಕಾರ ಲಸಿಕೆಗಳನ್ನು ಪಡೆಯಲು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದಿದ್ದಾರೆ.

ಕೇಂದ್ರ ಸರ್ಕಾರದ ಬೆಂಬಲದೊಂದಿಗೆ ವಿದೇಶದಿಂದ ಲಸಿಕೆ ಪಡೆಯಲು ನಾವು ಎಲ್ಲಾ ಪ್ರಯತ್ನಗಳನ್ನು ನಡೆಸುತ್ತಿದ್ದೇವೆ ಎಂದು ಸುಧಾಕರ್ ತಿಳಿಸಿದ್ದಾರೆ. ಲಸಿಕೆ ಪೂರೈಕೆಯಲ್ಲಿ ತೊಡಕಾಗಿರುವುದನ್ನು ಒಪ್ಪಿಕೊಂಡಿರುವ ಬೊಮ್ಮಾಯಿ, ರಾಜ್ಯಕ್ಕೆ ಲಸಿಕೆ ಬಂದ (3ನೇ ಪುಟಕ್ಕೆ)

## ದೇಶದೆಲ್ಲೆಡೆ ಲಸಿಕೆ ಕೊರತೆ

### ಆಮದಿಗೆ ಮುಂದಾದ ಇನ್ನಷ್ಟು ರಾಜ್ಯಗಳು

ನವದೆಹಲಿ, ಮೇ 12 – ದೇಶಾದ್ಯಂತ ಕೊರೊನಾ ಲಸಿಕೆ ಕೊರತೆ ಉಲ್ಬಣಿಸುತ್ತಿದ್ದು, ಮಹಾರಾಷ್ಟ್ರ ಹಾಗೂ ಕರ್ನಾಟಕಗಳಲ್ಲಿ 18 ವರ್ಷದ ವಯೋಮಾನದವರಿಗೆ ಲಸಿಕೆ ನೀಡುವುದನ್ನು ನಿಲ್ಲಿಸಲಾಗಿದೆ. ದೆಹಲಿಯಲ್ಲಿ ಕೊವ್ಯಾಕ್ಸಿನ್ ಲಸಿಕಾ ಕೇಂದ್ರಗಳನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ.

ತಮಿಳುನಾಡು ಸರ್ಕಾರ ಲಸಿಕೆಗಳಿಗಾಗಿ ಜಾಗತಿಕ ಟೆಂಡರ್ ಕರೆಯುವುದಾಗಿ ಘೋಷಿಸಿದ್ದರೆ, ರಾಜಸ್ಥಾನ ಸರ್ಕಾರ ಸಹ ಇದೇ ದಾರಿ ಹಿಡಿಯುತ್ತಿದೆ. ಮುಂದಿನ ಎರಡು ತಿಂಗಳಲ್ಲಿ 20 ಲಕ್ಷ ಸ್ಪುಟ್ನಿಕ್ ಲಸಿಕೆಗಳನ್ನು ಆಮದು ಮಾಡಿಕೊಳ್ಳುವುದಾಗಿ ಉತ್ತರಾಖಂಡದ ಅಧಿಕಾರಿಗಳು ಹೇಳಿದ್ದಾರೆ. ಉತ್ತರ ಪ್ರದೇಶ, ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ ಹಾಗೂ ದೆಹಲಿ ಸೇರಿದಂತೆ ಹಲವಾರು ರಾಜ್ಯಗಳು ಜಾಗತಿಕ ಟೆಂಡರ್ ಕರೆದಿವೆ.

ಈ ನಡುವೆ ಸೆರಮ್ ಇನ್‌ಸ್ಟಿಟ್ಯೂಟ್ ಹಾಗೂ ಭಾರತ್ ಬಯೋಟೆಕ್‌ಗಳು ಮುಂದಿನ ನಾಲ್ಕು ತಿಂಗಳ ಲಸಿಕಾ ಉತ್ಪಾದನಾ ವಿವರಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿವೆ. ಇದರ ಅನ್ವಯ ಆಗಸ್ಟ್ ವೇಳೆಗೆ ಸೆರಮ್ 10 ಕೋಟಿ ಹಾಗೂ ಭಾರತ್ ಬಯೋಟೆಕ್ 7.8 ಕೋಟಿ ಲಸಿಕೆ ಉತ್ಪಾದಿಸಲಿವೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಈ ನಡುವೆ ಹೇಳಿಕೆ ನೀಡಿರುವ ಕೇಂದ್ರ ಆರೋಗ್ಯ ಸಚಿವ ಹರ್ಷ ವರ್ಧನ್, ರಾಜ್ಯ ಸರ್ಕಾರಗಳು ಎರಡನೇ ಡೋಸ್ ನೀಡುವತ್ತ ಹೆಚ್ಚು ಗಮನ ಹರಿಸಬೇಕು ಎಂದು ಸೂಚನೆ ನೀಡಿದ್ದಾರೆ. (2ನೇ ಪುಟಕ್ಕೆ)

## ಸಿಇಟಿ ಪರೀಕ್ಷೆ ಮುಂದೂಡಿಕೆ

ಬೆಂಗಳೂರು, ಮೇ 12 - ಕೊರೊನಾ ಸೋಂಕು ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಸಿಇಟಿ ಪರೀಕ್ಷೆಗಳನ್ನು ರಾಜ್ಯ ಸರ್ಕಾರ ಮುಂದೂಡಿದೆ.

ಪರಿಷ್ಕೃತ ಆದೇಶದ ಪ್ರಕಾರ ಆಗಸ್ಟ್ 28 ರಿಂದ 30 ರವರೆಗೆ ಪರೀಕ್ಷೆ ನಡೆಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತಿಳಿಸಿದೆ.

ಈ ಮೊದಲೇ ನಿಗದಿಪಡಿಸಿದಂತೆ ಜುಲೈ 7 ರಿಂದ 9 ರವರೆಗೆ ಪರೀಕ್ಷೆಗಳು ನಡೆಯಬೇಕಿತ್ತು. ಆದರೆ ದ್ವಿತೀಯ ಪಿಯುಸಿ ಪರೀಕ್ಷೆ ಮುಂದೂಡಿರುವುದರಿಂದ ಸಿಇಟಿ ಪರೀಕ್ಷೆಗಳನ್ನು ಮುಂದೂಡಲಾಗಿದೆ.

28 ರ ಶನಿವಾರ ಬೆಳಿಗ್ಗೆ 10.30 ರಿಂದ 11.30 ರವರೆಗೆ ಜೀವಶಾಸ್ತ್ರ, ಅದೇ ದಿನ 2.30 ರಿಂದ 3.50 ರವರೆಗೆ ಗಣಿತ, 29 ರ ಭಾನುವಾರದಂದು ಮೊದಲನೇ ಸಮಯದಲ್ಲಿ ಭೌತಶಾಸ್ತ್ರ, ಎರಡನೇ ಪಾಳೆಯಲ್ಲಿ ರಾಸಾಯನ ಶಾಸ್ತ್ರ, 30 ಸೋಮವಾರದಂದು 11.30 ರಿಂದ 12.30 ರವರೆಗೆ ಕನ್ನಡ ಪರೀಕ್ಷೆ ನಡೆಯಲಿದೆ ಎಂದು ಪ್ರಾಧಿಕಾರ ತಿಳಿಸಿದೆ.

## ಕೋವಿಡ್ ಸೋಂಕಿತರ ಬೆಡ್ ಕೊರತೆ ನೀಗಿಸಲು 3,200 ಸ್ಟೆಪ್‌ಡೌನ್ ಆಸ್ಪತ್ರೆ : ಗೃಹ ಸಚಿವ

ಬೆಂಗಳೂರು, ಮೇ 12 - ಕೋವಿಡ್ ಸೋಂಕಿತರಿಗೆ ಎದುರಾಗುತ್ತಿರುವ ಹಾಸಿಗೆಗಳ ಕೊರತೆ ನೀಗಿಸುವ ಸಲುವಾಗಿ 3200 ಸ್ಟೆಪ್‌ಡೌನ್ ಆಸ್ಪತ್ರೆಗಳನ್ನು ನಿರ್ಮಿಸಲಾಗುತ್ತಿದೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಖಾಸಗಿ ಆಸ್ಪತ್ರೆಗಳ ಸಂಘ, ಹೋಟೆಲ್ ಉದ್ಯಮಿಗಳ ಸಂಘ ಹಾಗೂ ಅಧಿಕಾರಿಗಳ ಜತೆ ವರ್ಚ್ಯುವಲ್ ಸಭೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ 1200 ಸ್ಟೆಪ್ ಆಸ್ಪತ್ರೆಗಳನ್ನು ನಿರ್ಮಿಸಲಾಗಿದೆ. ಮುಂದಿನ ಎರಡು ದಿನಗಳಲ್ಲಿ ಎರಡು ಸಾವಿರ ಇಂತಹ ಆಸ್ಪತ್ರೆಗಳನ್ನು ನಿರ್ಮಿಸುವುದಾಗಿ ಹೇಳಿದರು.

ಪ್ರತಿಷ್ಠಿತ ಆಸ್ಪತ್ರೆಗಳ ಪಕ್ಕದಲ್ಲಿಯೇ ದೊಡ್ಡದೊಡ್ಡ ಹೋಟೆಲ್‌ಗಳಿವೆ. ಈ ಹೋಟೆಲ್‌ಗಳಲ್ಲಿ ರೂಂ ಪಡೆದು ಅಲ್ಲಿ ಆಸ್ಪತ್ರೆ ನಿರ್ಮಿಸಲಾಗುತ್ತಿದೆ. ಇದಕ್ಕಾಗಿ 13 ಆಸ್ಪತ್ರೆಗಳ ಜೊತೆ ಹೋಟೆಲ್‌ಗಳನ್ನು ಜೋಡಣೆ ಮಾಡಲಾಗಿದೆ. ಇನ್ನಷ್ಟು ಹೋಟೆಲ್ ಮತ್ತು ಆಸ್ಪತ್ರೆಗಳ ಜೋಡಣೆ ಕೆಲಸ ನಡೆಯುತ್ತಿದೆ. ಒಂದು ಸಾರಿ ಹೋಟೆಲ್ ಗಳನ್ನು ಪಡೆದ ನಂತರ ಅಲ್ಲಿ ಆಕ್ಸಿಜನ್ ಕಾನ್ಸಂಟ್ರೇಟರ್, ರೋಗಿಗೆ ಊಟ ಮತ್ತು ಇತರೆ ಕೋವಿಡ್ ಸಂಬಂಧಿತ ಚಿಕಿತ್ಸಾ ಸೌಲಭ್ಯವನ್ನು (2ನೇ ಪುಟಕ್ಕೆ)

## ಮೂರನೇ ದಿನ ಲಾಕ್‌ಡೌನ್: ಮಾರುಕಟ್ಟೆಯತ್ತ ಜಿಲ್ಲಾಧಿಕಾರಿ ಹೆಜ್ಜೆ

**ನಿಗದಿತ ಸಮಯ ಮೀರಿಯೂ ವ್ಯಾಪಾರ-ವಹಿವಾಟು: ಬುದ್ಧಿಮಾತು**

ದಾವಣಗೆರೆ, ಮೇ 12- ಸರ್ಕಾರ ಜಾರಿಗೊಳಿಸಿರುವ ಲಾಕ್‌ಡೌನ್‌ನ ಮೂರನೇ ದಿನವಾದ ಇಂದು ಜಿಲ್ಲೆಯಲ್ಲಿ ವ್ಯಾಪಕ ಬಂದೋಬಸ್ತ್ ಮಾಡಲಾಗಿತ್ತು. ಆದರೂ ಸಹ ರಸ್ತೆಗಳ ಸುತ್ತಿ ಬಳಸಿಯಾದರೂ ಪೊಲೀಸರ ಕಣ್ಣು ತಪ್ಪಿಸಿ ಕೆಲ ವಾಹನಗಳ ಓಡಾಟ ಮುಂದುವರೆದಿತ್ತು.

ಬೆಳಗ್ಗೆ ನಿಗದಿಯಾಗಿದ್ದ 10 ಗಂಟೆವರೆಗಿನ ಅವಕಾಶದ ಸಮಯದಲ್ಲಿ ಮಾತ್ರ ಅಗತ್ಯ ವಸ್ತು ಖರೀದಿಗೆ ಜನರು ಮುಗಿ ಬೀಳುತ್ತಿದ್ದ ದೃಶ್ಯ ನಗರದಲ್ಲಿ ಸಾಮಾನ್ಯವಾಗಿತ್ತು. ನಂತರದಲ್ಲಿ ಸಾರ್ವಜನಿಕರು ಸ್ವಯಂ ಪ್ರೇರಿತರಾಗಿ ದಿಗ್ಬಂಧನ ಹಾಕಿಕೊಂಡು ಮನೆಯಲ್ಲಿರುವ ಮುಖೇನ ಲಾಕ್‌ಡೌನ್‌ಗೆ ಸ್ಪಂದನೆ ನೀಡಿದ್ದರು.

ನಗರದ ಬಹುತೇಕ ಸಂಪರ್ಕವುಳ್ಳ ಪ್ರಮುಖ ಮತ್ತು ಒಳ ರಸ್ತೆಗಳು ಬಿಕೋ ಎನ್ನುತ್ತಿದ್ದವು. ಅಗತ್ಯ ವಸ್ತುಗಳ ಹೊರತುಪಡಿಸಿ ಉಳಿದೆಲ್ಲಾ ಅಂಗಡಿ-ಮುಂಗಟ್ಟುಗಳು ಬಂದ್ ಆಗಿದ್ದವು. ಜಿಲ್ಲಾ ಪೊಲೀಸ್‌ನಿಂದ ರಸ್ತೆಗಳಲ್ಲಿ ಹಾಕಲಾಗಿದ್ದ ಬ್ಯಾರಿಕೇಡ್ ಗಳಿಂದ ಭಾಗಶಃ ವಾಹನಗಳ ಓಡಾಟಕ್ಕೆ ಬ್ರೇಕ್ ಬಿದ್ದಿತ್ತು.

**ಮಾರುಕಟ್ಟೆಯತ್ತ ಜಿಲ್ಲಾಧಿಕಾರಿ ಹೆಜ್ಜೆ: ಬುದ್ಧಿ ಮಾತಿನೊಂದಿಗೆ ವ್ಯಾಪಾರ ತೆರವು:** ನಗರದಲ್ಲಿ ಸ್ವತಃ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಮಾರುಕಟ್ಟೆ ಪ್ರದೇಶಗಳಿಗೆ ಭೇಟಿ ನೀಡಿ, ಜನರಿಗೆ ಮತ್ತು ವ್ಯಾಪಾರಸ್ಥರಿಗೆ ಕೊರೊನಾ ವಿಚಾರವಾಗಿ ಪುನಃ ಬುದ್ಧಿ ಮಾತು ಹೇಳಿ ಜಾಗ ಖಾಲಿ ಮಾಡಿಸಿದರು.

ನಿಗದಿತ ಸಮಯ ಮೀರಿಯೂ ಸಹ ಕೆಆರ್ ಮಾರುಕಟ್ಟೆ, ಗಡಿಯಾರ ಕಂಬ, ಎಪಿಎಂಸಿ ಮಾರುಕಟ್ಟೆ ಆವರಣದಲ್ಲಿ ತಳ್ಳುವ ಗಾಡಿಯವರು ವ್ಯಾಪಾರ-ವಹಿ (3ನೇ ಪುಟಕ್ಕೆ)

## ಕೊರೊನಾ ಸಾವು : ಸಂಸದ, ಡಿಸಿ, ಎಸ್ಪಿ ಆಸ್ಪತ್ರೆಗೆ ಭೇಟಿ



**ಕೆಲವೊಂದು ರೋಗಿಗಳು ತಮಗೆ ಹೆಚ್ಚು ಆಕ್ಸಿಜನ್ ಕೊಡಿ ಎಂದು ಕೇಳುವುದರಿಂದ ಹೆಚ್ಚಿನ ಆಕ್ಸಿಜನ್ ಸಿಲಿಂಡರ್‌ಗಳು ಬಳಕೆ ಆಗುತ್ತಿವೆ. ದೇಹಕ್ಕೆ ಆಕ್ಸಿಜನ್ ಹಾಕಿಸಿಕೊಂಡಾಗ ಬೇರೆ ರೀತಿಯಲ್ಲಿ ದೇಹದಲ್ಲಿ ಆರೋಗ್ಯ ವ್ಯತ್ಯಾಸಗಳು ಕಂಡು ಬರುತ್ತವೆ.**
**- ಡಾ. ರಾಜಪ್ಪ**

ಹರಿಹರ, ಮೇ 12 - ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿ ಆಗದೇ ಕೊರೊನಾ ರೋಗಿ ಸಿದ್ದನಗೌಡ ಮರಣ ಹೊಂದಿದ ಬಗ್ಗೆ ವಿಡಿಯೋ ಒಂದು ಹರಿದಾಡಿದ್ದು, ಆಕ್ಸಿಜನ್ ಪೂರೈಕೆಯಾಗದೇ ಸಾವು ಸಂಭವಿಸಿದೆ ಎಂಬ ಆರೋಪಗಳು ಕೇಳಿ ಬಂದಿವೆ.

ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಆಸ್ಪತ್ರೆಗೆ ಸಂಸದ ಜಿ.ಎಂ.ಸಿದ್ದೇಶ್ವರ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಭೇಟಿ ನೀಡಿ, ಮರಣಕ್ಕೆ ಕಾರಣ ಏನು ಎಂಬುದರ ಬಗ್ಗೆ ಮಾಹಿತಿ ಪಡೆದರು.

ಈ ಬಗ್ಗೆ ತಿಳಿಸಿರುವ ವೈದ್ಯ ಡಾ. ರಾಜಪ್ಪ, ನಮ್ಮಲ್ಲಿ ಸುಮಾರು 56 ಕೊರೊನಾ ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರಿಗೆ ಯಾವುದೇ ರೀತಿಯ ತೊಂದರೆ ಬರದಂತೆ ಎಲ್ಲಾ ರೀತಿಯ ಚಿಕಿತ್ಸೆ ಕೊಡಲಾಗುತ್ತದೆ ಮತ್ತು ಮೆಡಿಕಲ್ ಆಕ್ಸಿಜನ್ ಸಹ ಅಷ್ಟೇ ಪ್ರಮಾಣದಲ್ಲಿ ಶೇಖರಣೆ ಇದೆ. ನಮ್ಮಲ್ಲಿ ಇರುವ ಕೊರೊನಾ ರೋಗಿಗಳಿಗೆ 30 ಆಕ್ಸಿಜನ್ ಸಾಕು. ಆದರೆ, ಕೆಲವೊಂದು ರೋಗಿಗಳು ತಮಗೆ ಹೆಚ್ಚು ಆಕ್ಸಿಜನ್ ಕೊಡಿ ಎಂದು ಕೇಳುವುದರಿಂದ ಸುಮಾರು 50 ಕ್ಕೂ ಹೆಚ್ಚು ಆಕ್ಸಿಜನ್ ಸಿಲಿಂಡರ್‌ಗಳು ಬಳಕೆ ಆಗುತ್ತಿವೆ ಎಂದಿದ್ದಾರೆ.

ಕೆಲವರಿಗೆ ಹೆಚ್ಚಿನ ಪ್ರಮಾಣದಲ್ಲಿ ದೇಹಕ್ಕೆ ಆಕ್ಸಿಜನ್ ಹಾಕಿಸಿಕೊಂಡಾಗ ಬೇರೆ ರೀತಿಯಲ್ಲಿ ದೇಹದಲ್ಲಿ ಆರೋಗ್ಯ ವ್ಯತ್ಯಾಸಗಳು ಕಂಡು ಬರುತ್ತವೆ. ಇದರಿಂದಾಗಿ ದೇಹಕ್ಕೆ ಎಷ್ಟು ಪ್ರಮಾಣದಲ್ಲಿ ಬೇಕೋ ಅಷ್ಟೇ ಪ್ರಮಾಣದಲ್ಲಿ ಹಾಕಿಸಿಕೊಳ್ಳಿ ಎಂದರೂ ಸಹ ಕೆಲವೊಬ್ಬರು ನಮ್ಮ ಮಾತುಗಳನ್ನು ಕೇಳಲಿಕ್ಕೆ ಸಿದ್ದರಿರುವುದಿಲ್ಲ ಮತ್ತು ಇಲ್ಲಿರುವ ಕೊರೊನಾ ರೋಗದ ವ್ಯಕ್ತಿಗಳಿಗೆ ಚಿಕಿತ್ಸೆಯಲ್ಲಿ ಕೊರತೆ ಬರದಂತೆ ಎಲ್ಲಾ ರೀತಿಯಲ್ಲಿ ಎಚ್ಚರಿಕೆ ವಹಿಸಲಾಗಿದೆ ಎಂದು ಹೇಳಿದರು.

ಸಂಸದ ಜಿ.ಎಂ.ಸಿದ್ದೇಶ್ವರ ಮಾತನಾಡಿ, ದೇಶದಾದ್ಯಂತ ಕೊರೊನಾ ರೋಗವು ದಿನದಿಂದ ದಿನಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹರಡುತ್ತಿರುವುದರಿಂದ ವೈದ್ಯರು ನಿರ್ಲಕ್ಷ್ಯ ವಹಿಸಿ ಕರ್ತವ್ಯ ಮಾಡಿದರೆ ಅನೇಕ ಸಾವು - ನೋವುಗಳು ಸಂಭವಿಸುವ ವಾತಾವರಣ ಸೃಷ್ಟಿಯಾಗಲು ದಾರಿಯಾಗುತ್ತದೆ. ಆದ್ದರಿಂದ ಬಹಳ ಜವಾಬ್ದಾರಿಯಿಂದ ತಮ್ಮ ಕರ್ತವ್ಯ ಮಾಡಬೇಕು ಮತ್ತು ರೋಗಿಗಳಿಗೆ ಯಾವುದೇ ವೈದ್ಯಕೀಯ ಸೇವೆಯನ್ನು ನೀಡುವಾಗ ಇಲ್ಲಿ ಯಾವುದೇ ಕೊರತೆ ಇದ್ದರೆ ಅದನ್ನು ನಮ್ಮ ಗಮನಕ್ಕೆ ತಂದರೆ, ಆ ಕ್ಷಣದಲ್ಲಿ ಸರ್ಕಾರದ ಗಮನಕ್ಕೆ ತಂದು ವ್ಯವಸ್ಥೆ ಮಾಡುವುದಕ್ಕೆ ಸಿದ್ದವಿರುವುದಾಗಿ ಹೇಳಿದರು.

ಇಲ್ಲಿನ ವೈದ್ಯರು ಬಹಳ ಮುತುವರ್ಜಿಯಿಂದ ತಮ್ಮ ಕರ್ತವ್ಯ ಮಾಡುವುದಕ್ಕೆ ಮುಂದಾಗಬೇಕು ಆಡಳಿತ ವೈದ್ಯಾಧಿಕಾರಿ ಹನುಮನಾಯ್ಕ್ ಹೆಚ್ಚು ನಿರ್ಲಕ್ಷ್ಯ ತೋರಿಸುತ್ತಾರೆ ಎಂದು ಹೇಳುತ್ತಾರೆ. ಇದು (2ನೇ ಪುಟಕ್ಕೆ)

## ಉತ್ತರ ಪ್ರದೇಶ : ಗಂಗಾನದಿಯಲ್ಲಿ ಮತ್ತೆ ಮೃತದೇಹಗಳು ಪತ್ತೆ

ಬಲಿಯಾ (ಉತ್ತರ ಪ್ರದೇಶ), ಮೇ 12 - ಗಂಗಾ ನದಿಯಲ್ಲಿ ಬುಧವಾರದಂದು ಏಳು ಮೃತದೇಹಗಳು ಪತ್ತೆಯಾಗಿದ್ದು, ಇದರಿಂದ ಉತ್ತರ ಪ್ರದೇಶದಲ್ಲಿ ಪತ್ತೆಯಾದ ಮೃತದೇಹಗಳ ಸಂಖ್ಯೆ 52ಕ್ಕೆ ತಲುಪಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೃತರು ಕೊರೊನಾ ಸೋಂಕಿಗೆ ಒಳಗಾಗಿರುವ ಸಾಧ್ಯತೆ ಇರುವುದರಿಂದ ಜಿಲ್ಲಾಡಳಿತ ತಕ್ಷಣವೇ ಮೃತದೇಹಗಳ ಅಂತ್ಯಕ್ರಿಯೆ ನೆರವೇರಿಸಿದೆ.

ಬಲ್ಲಿಯ ನಿವಾಸಿಗಳ ಪ್ರಕಾರ ಮಂಗಳವಾರ ಸಂಜೆ ಉಜಿಯರ್, ಕುಲ್ಡಡಿಯ ಹಾಗೂ ಭರೌಲಿ ಘಾಟ್‌ಗಳ ಬಳಿ 45 ಮೃತದೇಹಗಳು ಪತ್ತೆಯಾಗಿದ್ದವು. ಮಂಗಳವಾರ ತಡರಾತ್ರಿ ಇನ್ನೂ ಏಳು ಮೃತದೇಹಗಳು ಕಂಡು ಬಂದಿದ್ದವು.

## 2ನೇ ದಿನ ಸಕ್ರಿಯ ಸೋಂಕಿತರು ಇಳಿಕೆ

ನವದೆಹಲಿ, ಮೇ 12 - ದೇಶದಲ್ಲಿ ಸಕ್ರಿಯ ಕೊರೊನಾ ಸೋಂಕುಗಳ ಸಂಖ್ಯೆ ಸತತ ಎರಡನೇ ದಿನ ಇಳಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದೇಶದಲ್ಲಿ ಬುಧವಾರ 3.48 ಲಕ್ಷ ಕೊರೊನಾ ಸೋಂಕಿತರು ಪತ್ತೆಯಾಗಿದ್ದಾರೆ. ಇದೇ ದಿನ 3.55 ಲಕ್ಷ ಜನರು ಕೊರೊನಾದಿಂದ ಚೇತರಿಸಿಕೊಂಡಿದ್ದಾರೆ. ಪ್ರಸಕ್ತ ದೇಶದಲ್ಲಿ 33 ಲಕ್ಷದಷ್ಟು ಸಕ್ರಿಯ ಸೋಂಕಿತರಿದ್ದಾರೆ.

## ಜಿಲ್ಲೆಯಲ್ಲಿ 362 ಸೋಂಕಿತರು ಪತ್ತೆ

ದಾವಣಗೆರೆ, ಮೇ 12 – ಜಿಲ್ಲೆಯಲ್ಲಿ ಬುಧವಾರ 362 ಕೊರೊನಾ ಸೋಂಕಿತರು ಕಂಡು ಬಂದಿದ್ದು, (3ನೇ ಪುಟಕ್ಕೆ)

## ಖಾಸಗಿ ಆಸ್ಪತ್ರೆಗಳಲ್ಲಿ 14 ಔಷಧಗಳ ಕೊರತೆ

**ಸರ್ಕಾರಕ್ಕೆ ದೂರು ನೀಡಿದರೂ ಸ್ಪಂದನೆ ಇಲ್ಲವೆಂದು ಆಕ್ಷೇಪ**

ಬೆಂಗಳೂರು, ಮೇ 12 - ಕೊರೊನಾ ಲಸಿಕೆಗೆ ಹಾಹಾಕಾರ ಉಂಟಾಗಿರುವ ಬೆನ್ನಲ್ಲೇ, ರಾಜ್ಯದ ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಾಗಿರುವ ಕೊರೊನಾ ಸೋಂಕಿತರ ಚಿಕಿತ್ಸೆಗೆ ಬಳಸುವ 14 ಔಷಧಿಗಳ ಕೊರತೆ ಶುರುವಾಗಿದೆ.

ರೆಮ್‌ಡಿಸಿವಿರ್ 7 ಚುಚ್ಚು ಮದ್ದುಗಳು, ಎನೋಕ್ಸೋಪರೀನ್ 60 ಎಂಜಿ ಮತ್ತು 40 ಎಂಜಿ, ಆಂಫೊಟೆರಿಸಿನ್ ಬಿ 50 ಎಂಜಿ, ಮೀಥೈಲ್ ಪ್ರೆಡಿನಿಸೋಲೋನ್ 40 ಎಂಜಿ, 125 ಎಂಹೆಚ್, 500 ಎಂಜಿ ಮತ್ತು 1 ಗ್ರಾಂ, ಬೆವಾಟಾಸ್ 400 ಎಂಜಿ (ಬೆವಾಸಿಜುಮಾಬ್) ಮತ್ತು ಅಲ್ಜುಮಾಬ್ ಎಲ್ (ಇಟೊಲಿಜುಮಾಬ್). ಪಲ್ಸ್ ಆಕ್ಸಿಮೀಟರ್, ಸ್ಟೀಮರ್, ಗ್ಲೌಸ್ ಗಳ ಕೊರತೆ ಎದುರಾಗಿದೆ.

ಇದರ ಜೊತೆಗೆ ಇನ್ಹಲಾಂಟ್ ಕ್ಯಾಪ್ (ಕಾರ್ವೊಲ್ ಪ್ಲಸ್, ಸಿನಾರೆಸ್ಟ್ ವಾಪೋಕಪ್ಸ್) ಮತ್ತು ಡಾಕ್ಸಿಸೈಕ್ಲಿನ್ ಪ್ಲಸ್, ಲ್ಯಾಕ್ಟೋ ಬಾಸಿಲಸ್ ಕ್ಯಾಪ್ಸುಲ್ ಗಳು, ಡೊಲೋಟಸ್ ಎಸ್‌ಎಫ್, ಜೆರೊಟಸ್ ಎಕ್ಸ್‌ಪಿ ಮತ್ತು ಪಲ್ಮೋಕ್ಲಿಯರ್ ಕೆಮ್ಮು ಸಿರಪ್ ಗಳ ಕೊರತೆಯೂ ಆರಂಭವಾಗಿದೆ. ಈ ಔಷಧಿಗಳು ಎಲ್ಲಿಯೂ (2ನೇ ಪುಟಕ್ಕೆ)


## ಭಕ್ತಿಪೂರ್ಣ ಶ್ರದ್ಧಾಂಜಲಿ

ನಮಗಿಂದು ಮಾರ್ಗದರ್ಶಕರಿಲ್ಲ, ಮತ್ತೊಮ್ಮೆ ಹುಟ್ಟಿ ಬನ್ನಿ.....



ದಿನಾಂಕ : 12-5-2021ರಂದು ನಿಧನರಾದ ನಮ್ಮೆಲ್ಲರ ಪೂಜ್ಯ ಗೌರವಾನ್ವಿತ ಗುರುಗಳು ಹಾಗೂ ಹಾಲಿ ಶೃಂಗೇರಿಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾಗಿ (BEO) ಆಗಿ ಸೇವೆ ಸಲ್ಲಿಸುತ್ತಿದ್ದ

**ಡಾ || ನಾಗರಾಜ್ ಪಾಪಯ್ಯ**

ಅವರಿಗೆ ನಮ್ಮೆಲ್ಲರ ಭಕ್ತಿಪೂರ್ಣ ಶ್ರದ್ಧಾಂಜಲಿಗಳು. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದು:ಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಡಾ || ಬಾಬಾ ಸಾಹೇಬ್ ಅಂಬೇಡ್ಕರ್ ಶಾಲೆ, ಹರಿಹರದ 1991ನೇ ಸಾಲಿನ ದುಃಖತಪ್ತ ವಿದ್ಯಾರ್ಥಿ ವೃಂದ.**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 11-5- 2021ರ ಮಂಗಳವಾರ ರಾತ್ರಿ ನಿಧನರಾದ ನಮ್ಮ ಬ್ಯಾಂಕಿನ ಜೆ.ಜೆ.ಎಂ.ಎಂ.ಸಿ. ಶಾಖೆಯಲ್ಲಿ ಸೀನಿಯರ್ ಕ್ಲರ್ಕ್ ಆಗಿ ಕಾರ್ಯನಿರ್ವಹಿಸುತ್ತಿದ್ದ

**ಶ್ರೀ ಕೆ.ಎಂ.ರಾಜಶೇಖರ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತಾ, ಮೃತರ ಆತ್ಮಕ್ಕೆ ಶಾಂತಿ ಸಿಗಲಿ, ಕುಟುಂಬ ವರ್ಗದವರಿಗೆ ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿ ದೊರೆಯಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ,**
**ಪ್ರಧಾನ ವ್ಯವಸ್ಥಾಪಕರು ಮತ್ತು ಸಿಬ್ಬಂದಿ ವರ್ಗ,**
**ಬಾಪೂಜಿ ಕೋ ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ.**

# ರಾಣೇಬೆನ್ನೂರಿನಲ್ಲಿ ಐದು ಕೋವಿಡ್ ಕೇರ್ ಸೆಂಟರ್



ರಾಣೇಬೆನ್ನೂರು, ಮೇ 12- ಅಲ್ಪಸಂಖ್ಯಾತರ ವಸತಿ ನಿಲಯ, ಎಸ್.ಆರ್.ಕೆ. ವಿದ್ಯಾರ್ಥಿ ನಿಲಯ, ದೇವರಾಜ ಅರಸು ವಿದ್ಯಾರ್ಥಿ ನಿಲಯ, ಮಾಕನೂರಿನ ಮೊರಾರ್ಜಿ ದೇಸಾಯಿ ವಸತಿ ನಿಲಯ ಹಾಗೂ ದೇವರಗುಡ್ಡದ ಸಮಾಜ ಕಲ್ಯಾಣ ಇಲಾಖೆ ವಸತಿ ನಿಲಯ ಸೇರಿದಂತೆ ತಾಲ್ಲೂಕಿನಲ್ಲಿ ಒಟ್ಟು ಐದು ಕೋವಿಡ್ ಕೇರ್ ಸೆಂಟರ್ ಮಾಡಲಾಗಿದೆ, ಅದರಲ್ಲಿ ದೇವರಗುಡ್ಡ ಸೆಂಟರ್‌ನಲ್ಲಿ ಖಾಲಿ ಇದ್ದು ಉಳಿದೆಲ್ಲವೂ ಭರ್ತಿಯಾಗಿವೆ ಎಂದು ಶಾಸಕ ಅರುಣ ಪೂಜಾರ ಹೇಳಿದರು.

ತಮ್ಮ ಜನಸಂಪರ್ಕ ಕಛೇರಿಯಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಶನಿವಾರ ಮತ್ತು ಭಾನುವಾರದ ಸಂಪೂರ್ಣ ಲಾಕ್‌ಡೌನ್‌ಗೆ ಜನರು ಒಪ್ಪಿಗೆ ನೀಡುತ್ತಿದ್ದು, ಸೋಂಕು ತಡೆಗಟ್ಟಲು 5 ದಿನ ಸಂಪೂರ್ಣ ಬಂದ್ ಮಾಡಿ, ಒಂದು ದಿನ ಪೂರ್ತಿ ವ್ಯವಹಾರ ನಡೆಸುವ ಮಾರ್ಪಾಡಿಗೆ ಈಗಲೂ ನಾನು ಬದ್ಧನಿದ್ದು, ಜನರು ಸಹಕಾರ ನೀಡುವಂತೆ ಸಾರ್ವಜನಿಕರಲ್ಲಿ ಶಾಸಕರು ಮನವಿ ಮಾಡಿದರು.

**ಜೈನ್ ಸಮಾಜದಿಂದ ಗಾದಿ ಕೊಡುಗೆ :** ಕೋವಿಡ್ ಸೆಂಟರ್‌ಗೆ ಇಲ್ಲಿನ ಜೈನ್ ಶ್ವೇತಾಂಬರ ಸಮಾಜದವರು 50 ಗಾದಿ, ತಲೆದಿಂಬು ಹಾಗೂ ಬೆಡ್‌ಶೀಟ್‌ಗಳನ್ನು ಕೊಡುಗೆ ಯಾಗಿ ಕೊಟ್ಟಿದ್ದನ್ನು ಪ್ರಸ್ತಾಪಿದ ಶಾಸಕರು, ನಮಗೆ ಅತಿ ಅವಶ್ಯವಿದ್ದ ಆಮ್ಲಜನಕವನ್ನು ದಾವಣಗೆರೆ ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿ ಇಂದು ಬೆಳಗಿನ ಜಾವ ಕೊಡಿಸಿದ ಸಚಿವ ಬಸವರಾಜ ಬೊಮ್ಮಾಯಿ ಅವರು ನೂರಾರು ಜನರ ಪ್ರಾಣ ಉಳಿಸಿದ್ದನ್ನು ಪ್ರಶಂಸಿಸಿದರು.

ಶಾಸಕರ ಜೊತೆ ಬಿಜೆಪಿಯ ಸಂತೋಷ ಪಾಟೀಲ್, ದೀಪಕ್ ಹರಪನಹಳ್ಳಿ, ಪವನ್ ಮಲ್ಲಾಡ, ವಿಶ್ವನಾಥ್ ಪಾಟೀಲ್, ಜೈನ್ ಸಮಾಜದ ಪ್ರಕಾಶ ಜೈನ್, ಜಯಂತಿಲಾಲ್ ಜೈನ್, ರಾಜೇಂದ್ರ ಜೈನ್, ಚಂದೂಲಾಲ್, ನಿತೀಶ್ ಜೈನ್, ಮಹೇಶ್ ಜೈನ್ ಮತ್ತಿತರರಿದ್ದರು.

# ಲಸಿಕೆ ಇದ್ದರೂ ಮೊದಲ ಡೋಸ್ ಲಸಿಕೆ ಹಾಕದಿರುವ ಬಗ್ಗೆ ಸಾರ್ವಜನಿಕರ ಆಕ್ರೋಶ




ಮಲೇಬೆನ್ನೂರು, ಮೇ 12- ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕೋವಿಡ್ ಲಸಿಕೆ ದಾಸ್ತಾನು ಇದ್ದರೂ 45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡದಿರುವ ಬಗ್ಗೆ ಜನ ಸರ್ಕಾರ ಹಾಗೂ ಅಧಿಕಾರಿಗಳ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸಿದರು.

ಮಂಗಳವಾರ ಆರೋಗ್ಯ ಕೇಂದ್ರದಲ್ಲಿ ಮೊದಲ ಡೋಸ್ ಲಸಿಕೆ ಪಡೆಯಲು 45 ವರ್ಷ ಮೇಲ್ಪಟ್ಟ 40ಕ್ಕೂ ಹೆಚ್ಚು ಜನ ವಿವಿಧ ಗ್ರಾಮಗಳಿಂದ ಬೆಳಿಗ್ಗೆಯೇ ಆಗಮಿಸಿದ್ದರು. ಆದರೆ, ವೈದ್ಯರು ಇವತ್ತಿನಿಂದ 2ನೇ ಡೋಸ್‌ನವರಿಗೆ ಮಾತ್ರ ಲಸಿಕೆ ಹಾಕಿ ಎಂಬ ಸೂಚನೆ ಮೇಲಾಧಿಕಾರಿಗಳಿಂದ ಬಂದಿದೆ ಎಂಬ ಉತ್ತರ ನೀಡಿ, ಬಂದವರನ್ನೂ ವಾಪಸ್ ಕಳುಹಿಸಿದರು.

ಆದರೂ 58-60 ವರ್ಷದ ನಾಲ್ಕೈದು ಜನರು ನಮಗೆ ವಯಸ್ಸಾಗಿದೆ. ಕೊರೊನಾ ಸೋಂಕು ತಗುಲಿದರೆ ನಮಗೆ ಸುಧಾರಿಸಿಕೊಳ್ಳುವ ಶಕ್ತಿ ಇಲ್ಲ. ದಯವಿಟ್ಟು ನಮಗೆ ಲಸಿಕೆ ಹಾಕಿ ಎಂದು ಅಂಗಲಾಚಿ ಕೇಳಿಕೊಂಡರು.

ವೈದ್ಯ ಡಾ. ನಿಸಾರ್ ಅವರು, ನಾವು ಮೇಲಾಧಿಕಾರಿಗಳ ಆದೇಶ ಪಾಲಿಸಬೇಕು. ನೀವು ಅವರ ಜೊತೆಗೆ ಮಾತನಾಡಿ, ಅವರ ಒಪ್ಪಿಗೆ ಕೊಟ್ಟರೆ ಲಸಿಕೆ ಹಾಕುತ್ತೇವೆಂದರು. ಈ ಇದೇ ವೇಳೆಗೆ ಆಗಮಿಸಿದ ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಮಹಾಲಿಂಗಪ್ಪ, ಉಪತಹಶೀಲ್ದಾರ್ ಆರ್.ರವಿ ಮತ್ತು ಪತ್ರಕರ್ತರು, ಜನರ ಸಮಸ್ಯೆ ಆಲಿಸಿ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಮೀನಾಕ್ಷಿ ಅವರ ಜೊತೆ ಮಾತನಾಡಿದರು.

ಮೀನಾಕ್ಷಿ ಅವರು ನಮಗೆ ಇವತ್ತಿನ ಗೈಡ್‌ಲೈನ್ ಈ ರೀತಿ ಬಂದಿದೆ. ಹಾಗಾಗಿ ನಾವು 45 ವರ್ಷ ಮೇಲ್ಪಟ್ಟವರಿಗೆ ಇವತ್ತಿನಿಂದ ಹಾಕಬೇಡಿ ಎಂದಿದ್ದೇವೆ. 18 ವರ್ಷ ಮೇಲ್ಪಟ್ಟವರಿಗೆ ಆನ್‌ಲೈನ್‌ನಲ್ಲಿ ನೋಂದಣಿಯಾಗಿದ್ದರೆ ಅಂತಹವರಿಗೆ ಜಿಲ್ಲಾಸ್ಪತ್ರೆ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಮಾತ್ರ ಲಸಿಕೆ ನೀಡುತ್ತೇವೆ. 2ನೇ ಡೋಸ್‌ನವರಿಗೆ ಲಸಿಕೆ ಹಾಕುವ ಕೆಲಸ ಮುಗಿಯುವವರಿಗೂ 45 ವರ್ಷ ಮೇಲ್ಪಟ್ಟವರಿಗೆ ಮೊದಲ ಡೋಸ್ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

18 ವರ್ಷ ಮೇಲ್ಪಟ್ಟವರಿಗೆ ಮೊದಲ ಡೋಸ್ ನೀಡುವ ಸರ್ಕಾರ ನಮಗೆ ಏಕೆ ಮೊದಲ ಡೋಸ್ ನೀಡುತ್ತಿಲ್ಲ. ನಾವೇನು ತಪ್ಪು ಮಾಡಿದ್ದೇವೆ. ನಾವು ಸಾಯಬೇಕೇ ? ಎಂದು ಮೊದಲ ಲಸಿಕೆ ಪಡೆಯಲು ಬಂದಿದ್ದ ವೃದ್ಧರು ಹಿಡಿಶಾಪ ಹಾಕಿ ಆಸ್ಪತ್ರೆಯಿಂದ ತೆರಳಿದರು.

ಸರ್ಕಾರದ ಈ ರೀತಿಯ ಆದೇಶಗಳಿಂದ ಜನರಿಗೆ ತೊಂದರೆ ಆಗಲಿದೆ. ಸರ್ಕಾರ ಕೂಡಲೇ 45 ವರ್ಷ ಮೇಲ್ಪಟ್ಟವರಿಗೆ ಮೊದಲ ಡೋಸ್ ಲಸಿಕೆ ನೀಡಲು ಮುಂದಾಗಬೇಕೆಂದು ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಮಹಾಲಿಂಗಪ್ಪ ಒತ್ತಾಯಿಸಿದರು.

150 ಜನರಿಗೆ ಆಗುವಷ್ಟು ಲಸಿಕೆ ಇದ್ದರೂ 2ನೇ ಡೋಸ್ ಪಡೆಯಲು ಆಗಮಿಸಿದ್ದ 6 ಜನರಿಗೆ ಮಾತ್ರ ಲಸಿಕೆ ಹಾಕಿ, ಉಳಿದ ಲಸಿಕೆಯನ್ನು ವಾಪಸ್ ಹರಿಹರಕ್ಕೆ ಕಳುಹಿಸಿ ಎಂಬ ಅಧಿಕಾರಿಗಳ ಸೂಚನೆಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ ಘಟನೆಯೂ ನಡೆಯಿತು.

ಆಡಳಿತ ವೈದ್ಯಾಧಿಕಾರಿ ಡಾ. ಲಕ್ಷ್ಮೀದೇವಿ ಅವರು, ನಮ್ಮ ಆರೋಗ್ಯ ಕೇಂದ್ರದಲ್ಲಿ ಸುಮಾರು 1900 ಜನ ಮೊದಲ ಡೋಸ್ ಹಾಕಿಸಿಕೊಂಡಿದ್ದಾರೆ. ಇವರಲ್ಲಿ ಸುಮಾರು 400 ಜನರಿಗೆ ಮಾತ್ರ 2ನೇ ಡೋಸ್ ಲಸಿಕೆ ಹಾಕಿದ್ದೇವೆ. 2ನೇ ಡೋಸ್‌ನವರು ಮುಗಿದ ನಂತರ 45 ವರ್ಷ ಮೇಲ್ಪಟ್ಟವರಿಗೆ ಮೊದಲ ಲಸಿಕೆ ಹಾಕುವಂತೆ ಮೇಲಾಧಿಕಾರಿಗಳು ತಿಳಿಸಿದ್ದಾರೆ. 18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ಹಾಕಲು ನಮಗೆ ಯಾವುದೇ ಸೂಚನೆ ಬಂದಿಲ್ಲ ಎಂದರು.

# ದೇಶದೆಲ್ಲೆಡೆ ಕೊರೊನಾ ಲಸಿಕೆ ಕೊರತೆ

**(1ನೇ ಪುಟದಿಂದ)** ಶೇ.70ರಷ್ಟು ಲಸಿಕೆಯನ್ನು ಎರಡನೇ ಡೋಸ್ ಹಾಗೂ ಶೇ.30ರಷ್ಟನ್ನು ಮೊದಲ ಡೋಸ್‌ಗೆ ಕಾಯ್ದಿರಿಸಬೇಕೆಂದು ಅವರು ತಿಳಿಸಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಮಹಾರಾಷ್ಟ್ರದ ಆರೋಗ್ಯ ಸಚಿವ ರಾಜೇಶ್ ಟೋಪೆ, ಮೇ 20ರ ನಂತರ ರಾಜ್ಯಕ್ಕೆ 1.5 ಕೋಟಿ ಕೋವಿಶೀಲ್ಡ್ ಲಸಿಕೆ ಪೂರೈಕೆ ಆರಂಭಿಸುವುದಾಗಿ ಸೆರಮ್ ತಿಳಿಸಿದೆ ಎಂದಿದ್ದಾರೆ. 45 ವರ್ಷದ ಮೇಲಿನವರಿಗೆ ಕೇಂದ್ರದಿಂದ ಸಮರ್ಪಕವಾಗಿ ಲಸಿಕೆ ಪೂರೈಕೆಯಾಗುತ್ತಿಲ್ಲ. ಹೀಗಾಗಿ 18-44 ವರ್ಷದವರ ಲಸಿಕೆಯನ್ನು 45 ವರ್ಷದವರಿಗೆ ನೀಡಲು ನಿರ್ಧರಿಸಲಾಗಿದೆ. ಈ ಅವಧಿಯಲ್ಲಿ 18-44ರ ವಯೋಮಾನದವರಿಗೆ ಲಸಿಕೆ ನೀಡುವುದನ್ನು ನಿಲ್ಲಿಸಲಾಗುವುದು ಎಂದಿದ್ದಾರೆ.

## ಜಿಲ್ಲಾಸ್ಪತ್ರೆಗೆ ವಾಟರ್ ಡಿಸ್ಪೆನ್ಸರ್

**(1ನೇ ಪುಟದಿಂದ)** ದೃಷ್ಟಿಯಿಂದ 9 ಸಾವಿರ ಮೌಲ್ಯದ ಒಟ್ಟು 22 ನೀರಿನ ಡಿಸ್‌ಪೆನ್ಸರ್‌ಗಳನ್ನು ಜಿಲ್ಲಾಸ್ಪತ್ರೆಗೆ ಹಾಗೂ ಇಎಸ್‌ಐ ಆಸ್ಪತ್ರೆಗಳಿಗೆ ನೀಡಿದ್ದು, ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಕೋವಿಡ್ ನೋಡಲ್ ಅಧಿಕಾರಿ ಪ್ರಮೋದ್ ನಾಯಕ್, ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ಜಿಲ್ಲಾಸ್ಪತ್ರೆ ಡಿಎಸ್ ಡಾ. ಜಯಪ್ರಕಾಶ್ ಸೇರಿದಂತೆ ಇತರರಿದ್ದರು.


ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ದಾಟಿ ಹೊಸ ಬನಶಂಕರಿ ಲೇಔಟ್‌ನಲ್ಲಿ ಸೈಟ್‌ಗಳು ಮಾರಾಟಕ್ಕಿವೆ
30x40 West, 40 ಅಡಿ ರೋಡಿಗಿದೆ, 30x57 East, 30x50 West, 60x50 West, 42x65 East
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ದಿ. ಡಿ.ಕೃಷ್ಣಮೂರ್ತಿ ಇವರ ಜ್ಞಾಪಕಾರ್ಥವಾಗಿ ಕೆ. ಪ್ರದೀಪ್ ಮತ್ತು ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಬೇಕಾಗಿದ್ದಾರೆ**
1) ಸ್ಟಾಫ್ ನರ್ಸ್‌ಗಳು
2) ಲ್ಯಾಬ್ ಟೆಕ್ನೀಷಿಯನ್
3) ಹಗಲು ಮತ್ತು ರಾತ್ರಿ ವಾಚ್‌ಮನ್‌ಗಳು
ಸಂಪರ್ಕಿಸಿ :
98808 53626

**ಬೇಕಾಗಿದ್ದಾರೆ**
ನುರಿತ ರೈಸ್‌ಮಿಲ್ ಡ್ರೈಯರ್ ಆಪರೇಟರ್ ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ
ಮೊ: 95918 04999
ಬಸವರಾಜ್: 96635 18383

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ.
ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ.
(ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಮನೆ ನೀರಿನ ತೊಟ್ಟಿಯನ್ನು ಸಿನ್ ಟ್ಯಾಂಕ್ ಮಿಷನ್‌ನಲ್ಲಿ ಕ್ಲೀನಿಂಗ್ ಮಾಡಲಾಗುತ್ತದೆ.**
99863 61250
91132 85992

ಪ್ರತಿಷ್ಠಿತ CBSE ಶಾಲೆಗೆ ಅನುಭವಿ ಶಿಕ್ಷಕರು ಬೇಕಾಗಿದ್ದಾರೆ
ಸಮಾಜ ವಿಜ್ಞಾನ, ಸಂಸ್ಕೃತ, Chemistry ಮತ್ತು Biology, ಗಣಿತ,
ಸಂಪರ್ಕಿಸಿ : 9844443223, 7378392875, 9538688975

**ಬೇಕಾಗಿದ್ದಾರೆ**
ಮನೆಯಲ್ಲಿ ಬೆಳಿಗ್ಗೆ 8 ರಿಂದ ಅಡುಗೆ ಮಾಡಲು ಹೆಣ್ಣು ಮಕ್ಕಳು ಬೇಕಾಗಿದ್ದಾರೆ. ಸಂಪರ್ಕಿಸಿ :
63639 54459

**ಸಮಯ ಬದಲಾವಣೆ**
ಸಕ್ಕರೆ ಕಾಯಿಲೆಯವರ ಅನುಕೂಲಕ್ಕಾಗಿ ಆಲೂರು ಆಸ್ಪತ್ರೆಯು ಬೆಳಿಗ್ಗೆ 7 ರಿಂದ 10 ಗಂಟೆಯವರೆಗೆ ಮತ್ತು ಬೆಳಿಗ್ಗೆ 11 ರಿಂದ 2 ಗಂಟೆಯವರೆಗೆ ಲಭ್ಯವಿರುತ್ತದೆ.
ಮೊ. : 88677 75564

**ಲಿಂಗಾಯತ ವಧು-ವರ**
ಲಿಂಗಾಯತ, ಜಂಗಮ ಇಂಜಿನಿಯರ್ಸ್, ಡಾಕ್ಟರ್ಸ್, ಬಿಸ್‌ನೆಸ್‌ಮೆನ್, ಸರ್ಕಾರಿ ಹಾಗೂ ಖಾಸಗಿ ನೌಕರಿಯಲ್ಲಿರುವ ವಧು-ವರರಿಗಾಗಿ ಸಂಪರ್ಕಿಸಿ
ಮೊ: 9880729108

**ಬೇಕಾಗಿದ್ದಾರೆ**
SBI Life ಗೆ 10 ಜನ ಇನ್ಶೂರೆನ್ಸ್ ಏಜೆಂಟ್ ಬೇಕಾಗಿದ್ದಾರೆ. ಎಸ್.ಎಸ್.ಎಲ್.ಸಿ / ಪಿಯುಸಿ ಮಾಡಿರುವ 30 ವರ್ಷ ಮೇಲ್ಪಟ್ಟವರು ಪಾರ್ಟ್ ಟೈಮ್ ಕೆಲಸ ಮಾಡಿ ತಿಂಗಳಿಗೆ 30 ಸಾವಿರ ಸಂಪಾದಿಸಬಹುದು.
99009 19091

**ವಧು ಬೇಕಾಗಿದೆ**
ಕ್ಷತ್ರಿಯ 33 ವರ್ಷದ MDS ಡಾಕ್ಟರ್ಸ್‌ಗೆ ಯಾವುದೇ ಜಾತಿಯ MBBS, MD, BDS, MDS ವಧು ಬೇಕಾಗಿದೆ.
ಮೊ: 9880729108

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

ಓಂ ಶ್ರೀ ಕೇರಳ ಭದ್ರಕಾಳಿ ಜ್ಯೋತಿಷ್ಯರು
ಪಂಡಿತ್ ಶಕ್ತಿಪ್ರಸಾದ್
ನುಡಿದಂತೆ ನಡೆಯುವುದು.ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮಾಟ-ಮಂತ್ರ, ವಶೀಕರಣ, ಸಾಲಬಾಧೆ, ಆರೋಗ್ಯ, ಇನ್ನೂ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಇಂದೇ ಕರೆ ಮಾಡಿ ಪರಿಹರಿಸಿಕೊಳ್ಳಿ. 100% ಪರಿಹಾರ ಶತಸಿದ್ಧ.
9980770791

**ಸಂಪರ್ಕಿಸಿ**
ನಿಮಗೆ ರಾಜಕೀಯ ಜೀವನದಲ್ಲಿ ಯಶಸ್ಸು ಕಾಣುವ ಹಂಬಲ ಉಂಟೇ? ಪುರಾತನ ಯೋಗ ತಂತ್ರ ಸಾಧನೆಯ ಬಲದಿಂದ ಇದು ಸುಲಭ ಸಾಧ್ಯ. ಹಾಗಾದರೆ ನಮ್ಮನ್ನು ಈ ಕೂಡಲೇ ಸಂಪರ್ಕಿಸಿ :
76767 50280


# ಕೊರೊನಾ ಸಾವು : ಸಂಸದ, ಡಿಸಿ, ಎಸ್ಪಿ ಆಸ್ಪತ್ರೆಗೆ ಭೇಟಿ

**(1ನೇ ಪುಟದಿಂದ)** ಸರಿಯಾದ ಬೆಳವಣಿಗೆಯಲ್ಲ. ನೀವು ಕರ್ತವ್ಯ ಮಾಡುವಾಗ ಸ್ವಲ್ಪ ನಿರ್ಲಕ್ಷ್ಯ ಮಾಡುವುದರಿಂದ ಹಲವಾರು ಜನರು ಪ್ರಾಣವನ್ನು ಕಳೆದುಕೊಳ್ಳುವಂತಹ ಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ ಇನ್ನೂ ಮುಂದಾದರೂ ಸಹ ಸರಿಯಾದ ರೀತಿಯಲ್ಲಿ ಕರ್ತವ್ಯ ನಿರ್ವಹಿಸಲು ಮುಂದಾಗಿ ಎಂದು ಹೇಳಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಹನುಮನಾಯ್ಕ್‌ರವರ ನಿರ್ಲಕ್ಷ್ಯ ಹೆಚ್ಚಾಗಿಯೇ ಇದೇ ಎಂದು ಸಾಕಷ್ಟು ಜನರು ದೂರುತ್ತಾರೆ. ಆದ್ದರಿಂದ ನೀವು ಬಹಳ ಕಟ್ಟುನಿಟ್ಟಾಗಿ ಕರ್ತವ್ಯ ಮಾಡುವುದಕ್ಕೆ ಮುಂದಾಗಬೇಕು. ಇಲ್ಲದೇ ಹೋದರೆ ಮುಂದೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಇಲ್ಲಿನ ಆಸ್ಪತ್ರೆ ಆವರಣದಲ್ಲಿ ರೋಗಿಯೊಬ್ಬರು ಗುಣಮುಖರಾಗಿದ್ದರೂ ಸಹ ಆಸ್ಪತ್ರೆಯ ಒಳಗೆ ಇದ್ದು ವಿಡಿಯೋ ಮಾಡಿ ನಾನು ರೋಗಿಗಳ ಪರವಾಗಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿ ಇಲ್ಲಿನ ರೋಗಿಗಳ ವಿಡಿಯೋಗಳನ್ನು ಹೊರಗಡೆ ಬಿಡುತ್ತಿದ್ದು, ಅಂತಹ ವ್ಯಕ್ತಿ ಯಾರು ಎಂದು ಈಗಾಗಲೇ ಗುರುತಿಸಲಾಗಿದೆ. ಅವರ ಮೇಲೆ ವಿಪತ್ತು ನಿರ್ವಹಣಾ ಕಾಯ್ದೆಯ ಅಡಿಯಲ್ಲಿ ಮೂರು ವರ್ಷಗಳ ಕಾಲ ಶಿಕ್ಷೆಯನ್ನು ಕೊಡಿಸದೇ ಬಿಡುವುದಿಲ್ಲ ಎಂದು ಹೇಳಿದರು.

ಇಲ್ಲಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಸಾಕಷ್ಟು ಸಿಬ್ಬಂದಿಗಳ ಕೊರತೆ ಇದೆ ಎಂದು ನರ್ಸ್ ಶೋಭಾ ದೊಡ್ಡಮನಿ ಜಿಲ್ಲಾಧಿಕಾರಿಗಳಿಗೆ ತಿಳಿಸಿದಾಗ, ಇಲ್ಲಿನ ಆಸ್ಪತ್ರೆಗೆ ಇನ್ನೂ 20 ಸಿಬ್ಬಂದಿಗಳನ್ನು ನೇಮಕ ಮಾಡಿ ಕಳಿಸಲು ಸಿದ್ದತೆ ಮಾಡಲಾಗಿದೆ. ಇನ್ನೂ ಮೂರು - ನಾಲ್ಕು ದಿನಗಳಲ್ಲಿ ಸಿಬ್ಬಂದಿಗಳ ವ್ಯವಸ್ಥೆ ಮಾಡಲಾಗುತ್ತದೆ ಎಂದರು.

ಸಂಸದರು, ಜಿಲ್ಲಾಧಿಕಾರಿಗಳು, ಎಸ್ಪಿ ಅವರು ಇಲ್ಲಿನ ಆಕ್ಸಿಜನ್ ವಿತರಣೆ ಮಾಡುವ ಯಂತ್ರದ ಬಳಿ ತೆರಳಿ ಶಶಿಕಾಂತ್ ಎಂಬವವರ ಬಳಿ ಮಾಹಿತಿ ಸಂಗ್ರಹಿಸಿ, ಕೊರೊನಾ ರೋಗಿಗಳಿಗೆ ತೊಂದರೆ ಆಗದಂತೆ ಸರಿಯಾದ ರೀತಿಯಲ್ಲಿ ಕರ್ತವ್ಯ ಮಾಡುವುದಕ್ಕೆ ಸಿಬ್ಬಂದಿಗಳಿಗೆ ಸೂಚಿಸಿದರು. ಸಾರ್ವಜನಿಕ ಆಸ್ಪತ್ರೆಯಿಂದ ಗುತ್ತೂರು ಬಳಿ ಇರುವ ಕೋವಿಡ್ ಕೇರ್ ಸೆಂಟರ್‌ಗೆ ಹೋಗಿ ಕೊರೊನಾ ರೋಗಿಗಳ ಯೋಗಕ್ಷೇಮ ವಿಚಾರಿಸಿ, ನಂತರದಲ್ಲಿ ಹರಿಹರದಿಂದ ತೆರಳಿದರು.

ಈ ಸಂದರ್ಭದಲ್ಲಿ ಸಿಪಿಐ ಸತೀಶ್ ಕುಮಾರ್, ಡಾ. ಹನುಮನಾಯ್ಕ್ ಮತ್ತು ಇತರರು ಹಾಜರಿದ್ದರು.

## ಕೋವಿಡ್ : 3,200 ಸ್ಟೆಪ್‌ಡೌನ್ ಆಸ್ಪತ್ರೆ

**(1ನೇ ಪುಟದಿಂದ)** ಕಲ್ಪಿಸಲಾಗುವುದು ಎಂದವರು ತಿಳಿಸಿದರು.

ಬೆಂಗಳೂರಿನಲ್ಲಿ ಬೆಡ್ ಬೇಡಿಕೆ ಹೆಚ್ಚಾಗುತ್ತಿದೆ. ಹೀಗಾಗಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಖಾಸಗಿ ಆಸ್ಪತ್ರೆಗಳ ಆವರಣದಲ್ಲಿ ಹೆಚ್ಚುವರಿಯಾಗಿ ತಲಾ 10 ರಿಂದ 15 ಆಕ್ಸಿಜನ್ ಬೆಡ್ ಗಳನ್ನು ನಿರ್ಮಾಣ ಮಾಡಲು ಒಪ್ಪಿಗೆ ನೀಡಲಾಗಿದೆ. ಇದಕ್ಕೆ ಸರಕಾರದಿಂದ ಸಹಕಾರ ನೀಡಲಾಗುವುದು ಎಂದು ಅವರು ತಿಳಿಸಿದರು.

ಖಾಸಗಿ ಆಸ್ಪತ್ರೆಗಳಲ್ಲಿನ ಬೆಡ್ ಉಸ್ತುವಾರಿಗೆ ನಿಯೋಜಿಸಲಾಗಿರುವ ಹಿರಿಯ ಅಧಿಕಾರಿಗಳ ಜೊತೆ ಮಂಗಳವಾರ ಸಭೆ ನಡೆಸಲಾಯಿತು. ಸರ್ಕಾರಕ್ಕೆ ಬೆಡ್ ಗಳನ್ನು ನೀಡದೆ ಸುಳ್ಳು ಮಾಹಿತಿ ನೀಡುತ್ತಿದ್ದ ಮೂರು ಖಾಸಗಿ ಆಸ್ಪತ್ರೆಗಳ ಮೇಲೆ ಈಗಾಗಲೇ ಕ್ರಮ ಜರುಗಿಸಲಾಗಿದೆ ಎಂದು ಅವರು ವಿವರಿಸಿದರು.

## ಕೊರೊನಾ ಎದುರಿಸಲು ಲಸಿಕೆ ಸುರಕ್ಷಿತ



**ಹರಪನಹಳ್ಳಿಯಲ್ಲಿ ತಾ. ಆರೋಗ್ಯ ಶಿಕ್ಷಣಾಧಿಕಾರಿ ಹೆಚ್. ಗೌರಮ್ಮ**

ಹರಪನಹಳ್ಳಿ, ಮೇ 12- ಕೊರೊನಾ 2ನೇ ಅಲೆ ವ್ಯಾಪಕವಾಗಿ ಹರಡುತ್ತಿದ್ದು, ಮಹಾಮಾರಿಯನ್ನು ಹೊಡೆದೋಡಿಸಲು ಕೋವಿಡ್ ಲಸಿಕೆ ಸುರಕ್ಷಿತವಾಗಿದೆ. ಊಹಾಪೋಹಗಳಿಗೆ ಕಿವಿಗೊಡದೆ 45 ವರ್ಷ ಮೇಲ್ಪಟ್ಟ ಎಲ್ಲರೂ ಕೋವಿಡ್ ಲಸಿಕೆ ಹಾಕಿಸಿಕೊಳ್ಳಿ ಎಂದು ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿ ಹೆಚ್.ಗೌರಮ್ಮ ಹೇಳಿದರು.

ತಾಲ್ಲೂಕಿನ ಬಾಗಳಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಶೃಂಗಾರತೋಟ ಗ್ರಾಮದಲ್ಲಿ ಹಮ್ಮಿಕೊಂಡಿದ್ದ 45 ವರ್ಷ ಮೇಲ್ಪಟ್ಟ ವರಿಗೆ ಕೋವಿಡ್ ಲಸಿಕಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ ದರು.


ಬಾಗಳಿ ಗ್ರಾ.ಪಂ ಅಧ್ಯಕ್ಷ ಪೂಜಾರ್ ಹನುಮಂತಪ್ಪ ಮಾತನಾಡಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯ್ತಿ ಸದಸ್ಯರಾದ ಬಸವರಾಜಪ್ಪ, ಮರಿಯಮ್ಮ, ಹುಸೇನಾಬೀ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಖಾಸಗಿ ಆಸ್ಪತ್ರೆಗಳಲ್ಲಿ 14 ಔಷಧಗಳ ಕೊರತೆ

**(1ನೇ ಪುಟದಿಂದ)** ಸಿಗುತ್ತಿಲ್ಲ. ಈ ಔಷಧಿಗಳು ಕೊರೊನಾ ಸೋಂಕಿತರ ಚಿಕಿತ್ಸೆಗೆ ಅತ್ಯಗತ್ಯವಾಗಿದ್ದು, ಯಾವುದೇ ಔಷಧಿಗಳು ಅಂಗಡಿಗಳು, ಸರಬರಾಜುದಾರರ ಬಳಿಯೂ ದೊರೆಯುತ್ತಿಲ್ಲ. ನಮ್ಮ ಬಳಿ ಔಷಧಿಗಳಿದ್ದರೂ ದಾಖಲಾಗುತ್ತಿರುವ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಈ ಔಷಧಿಗಳು ಸಾಕಾಗುವುದಿಲ್ಲ ಎಂದು ಖಾಸಗಿ ಆಸ್ಪತ್ರೆಯ ಮುಖ್ಯಸ್ಥರು ಸರಕಾರಕ್ಕೆ ಪತ್ರ ಬರೆದಿದ್ದಾರೆ.

ಆಕ್ಸಿಜನ್ ಮಾಸ್ಕ್, ಗ್ಲೌಸ್ ಗಳು ಹಾಗೂ ಇತರೆ ಔಷಧಿಗಳ ಕೊರತೆ ಶುರುವಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಮುಖ್ಯಸ್ಥರಿಗೆ ವಸ್ತುಸ್ಥಿತಿಯನ್ನು ಮನವರಿಕೆ ಮಾಡಿದ್ದೇವೆ. ಆದರೆ, ಸರ್ಕಾರದಿಂದ ನಮಗೆ ಯಾವುದೇ ಸಕಾರಾತ್ಮಕ ಪ್ರತಿಕ್ರಿಯೆ ಬಂದಿಲ್ಲ ಕೆಲವರು ಅಸಮಾಧಾನ ಹೊರಹಾಕಿದ್ದಾರೆ.

**ಎರಡನೇ ವರ್ಷದ ಪುಣ್ಯಸ್ಮರಣೆ**



**ಅಂ॥ ಚಂದ್ರಮ್ಮನವರು**
ನಿಧನ : 13.05.2019

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು, ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ....

ಪತಿ : **ಶ್ರೀ ಹರಿಯಪ್ಪ ಜಿ.ಜಿ.**
ಮಗ : **ಶ್ರೀ ಜಿ.ಹೆಚ್. ಚೇತನ್ ಕುಮಾರ್ ಶ್ರೀಮತಿ ಅಶ್ವಿನಿ ಚೇತನ್**
ಮಗಳು : **ಜಿ.ಹೆಚ್. ವಾಣಿಶ್ರೀ, ಶ್ರೀ ಬಸವರಾಜ್ ಜಿ.ಆರ್.**
ಮೊಮ್ಮಕ್ಕಳಾದ : **ಚಿ॥ ಸಂಜಯ್ ಭಾರ್ಗವ್, ಚಿ॥ ರವಿಶಂಕರ್**
ಪುಟಾಣಿ : **ಚಿನ್ಮಯಿ ಜಿ.ಸಿ., ರೋಹನ್ ಜಿ.ಸಿ.**

**ಕೆ.ಅಬ್ದುಲ್ ಹಫೀಜ್ ಬೇಗ್ (ಬೇಗ್ ಹಜರತ್) ನಿಧನ**



ದಾವಣಗೆರೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ 8ನೇ ಕ್ರಾಸ್ ವಾಸಿ ಕೆ. ಅಬ್ದುಲ್ ಹಫೀಜ್ ಬೇಗ್ (ಬೇಗ್ ಹಜರತ್) (72) ಅವರು ದಿನಾಂಕ 12.05.2021 ರ ಬುಧವಾರ ಸಂಜೆ 7 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.05.2021 ರ ಗುರುವಾರ ಬೆಳಿಗ್ಗೆ 8 ಕ್ಕೆ ಪಿ.ಬಿ. ರಸ್ತೆಯಲ್ಲಿರುವ ಹಳೇ ಖಬರಸ್ಥಾನದಲ್ಲಿ ನೆರವೇರಲಿದೆ.

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 12.05.2021ರಂದು ಅಕಾಲಿಕವಾಗಿ ನಿಧನರಾದ ಮೈಕ್ರೋ ಚಿತ್ರ ಕಲಾವಿದರೂ, ಜಾಗತಿಕ ಪ್ರಶಸ್ತಿ ವಿಜೇತರೂ, ನಮ್ಮ ಆತ್ಮೀಯರೂ ಆದ

**ಡಾ॥ ರಾಜೇಶ್ ವೆರ್ಣೇಕರ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರುಗಳ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

**ಸತ್ಯನಾರಾಯಣ ಆರ್. ರಾಯ್ಕರ್**
ಅಧ್ಯಕ್ಷರು, ದೈವಜ್ಞ ಸಮಾಜ ಸಂಘ (ರಿ.), ದಾವಣಗೆರೆ.

# ಎಸ್.ಕೆ.ವಿಜಯಕುಮಾರ್ ನಿಧನ



ದಾವಣಗೆರೆ ಪಿ.ಜೆ.ಬಡಾವಣೆ ವಾಸಿ, ದಿವಂಗತ ಶ್ರೀ ಎಸ್.ಕೊಟ್ರಬಸಪ್ಪನವರ ಚತುರ್ಥ ಪುತ್ರ

**ಶ್ರೀ ಎಸ್.ಕೆ.ವಿಜಯಕುಮಾರ್** (57)

ಅವರು ದಿನಾಂಕ 12-5-2021ರ ಬುಧವಾರ ಬೆಳಿಗ್ಗೆ 11-15ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಓರ್ವ ಪುತ್ರಿ, ಸಹೋದರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಶ್ರೀಯುತರ ಅಂತ್ಯಕ್ರಿಯೆಯು ದಿನಾಂಕ : 12-5-2021ರಂದೇ ಮಧ್ಯಾಹ್ನ 2 ಗಂಟೆಗೆ ನಗರದ ಲೇಬರ್ ಕಾಲೋನಿಯಲ್ಲಿರುವ ಆರ್.ಹೆಚ್.ಬೃಂದಾವನದಲ್ಲಿ ನೆರವೇರಿತು.


**ದುಃಖತಪ್ತ ಕುಟುಂಬ ವರ್ಗ**
ಪತ್ನಿ : ಶ್ರೀಮತಿ ಎಸ್.ವಿ.ಶಶಿಕಲಾ, ಪುತ್ರಿ : ಕು॥ ತನುಶ್ರೀ ಎಸ್.ವಿ.,
ಶ್ರೀಮತಿ ಶ್ರೀ ಎಸ್.ಕೆ.ಶಿವಕುಮಾರ್ ಮತ್ತು
ಎಸ್ಕೆ ಕುಟುಂಬದ ಸರ್ವಸದಸ್ಯರು, ದಾವಣಗೆರೆ.

**ಪ್ರಥಮ ವರ್ಷದ ಪುಣ್ಯಸ್ಮರಣೆ**



**ದಿ॥ ಶ್ರೀ ಹೆಚ್.ಮೈಲಪ್ಪನವರು**
(ಆದಾಯ ತೆರಿಗೆ ಇಲಾಖೆ ನಿವೃತ್ತ, ಗಾಂಧಿನಗರ, ದಾವಣಗೆರೆ.)
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ನಿಮ್ಮ ಸವಿ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ. ಸದಾ ನಿಮ್ಮ ನೆನಪಿನಲ್ಲಿರುವ...
-: ಇಂತಿ ದುಃಖತಪ್ತರು :-
ಧರ್ಮ ಪತ್ನಿ ಶ್ರೀಮತಿ ಹಾಲಮ್ಮ ಮತ್ತು ಮಕ್ಕಳು
ಅಳಿಯಂದಿರು, ಮೊಮ್ಮಕ್ಕಳು,
ಶಾಮನೂರು ವಂಶಸ್ಥರು ಹಾಗೂ ಬಂಧು-ಮಿತ್ರರು.

**ಎಸ್. ದಕ್ಷಿಣಾಮೂರ್ತಿ ನಿಧನ**



ದಾವಣಗೆರೆ ವಿದ್ಯಾನಗರದ ಬಿ-12 ವಾಸಿ
ಶ್ರೀ ದಕ್ಷಿಣಾಮೂರ್ತಿ ಎಸ್. ಅವರು ದಿನಾಂಕ 12.5.2021ರ ಬುಧವಾರ ಮಧ್ಯಾಹ್ನ 2.30 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 89 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 12.5.2021ರ ಬುಧವಾರ ಸಂಜೆ 6.30ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿತು.

ದುಃಖತಪ್ತ ಕುಟುಂಬ ವರ್ಗ, ಮೊ. : 93425 99504

**ಗಿಡ ಬೆಳೆಸಿ, ಆಮ್ಲಜನಕದ ಕೊರತೆ ನೀಗಿಸಿ**

**ನಿವೃತ್ತ ಶಿಕ್ಷಕ ಹೆಚ್.ಎಸ್. ಶಿವಮೂರ್ತಪ್ಪ ನಿಧನ**



ದಾವಣಗೆರೆ ಸಿಟಿ ವಿನೋಬನಗರ 1ನೇ ಮೇನ್, 10ನೇ ಕ್ರಾಸ್, ಚೌಡಮ್ಮನ ದೇವಸ್ಥಾನದ ಪಕ್ಕ ವಾಸಿ, ಶ್ರೀಮತಿ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಶಾಲೆಯ ನಿವೃತ್ತ ಶಿಕ್ಷಕರಾದ ಹೆಚ್.ಎಸ್. ಶಿವಮೂರ್ತಪ್ಪ (65) ಅವರು ದಿನಾಂಕ 12.5.2021ರ ಬುಧವಾರ ರಾತ್ರಿ 11.45ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.5.2021ರ ಗುರುವಾರ ಮಧ್ಯಾಹ್ನ 11 ಗಂಟೆಗೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಲಿದೆ.







### ಕ್ಯೂ.... ಕಾಲ!

ಹೋದ ವರ್ಷನೂ ಇದೇ ಸಮಯದಲ್ಲಿ ಕೊರೊನಾ ಕಾಟ ಕೊಟ್ಟಿತ್ತು. ಇನ್ನು ಒಂದೆರಡು ತಿಂಗಳು ಇದು ಕೇಕೆ ಹಾಕುತ್ತೆ ಅನಿಸುತ್ತೆ.

**ಹೌದು.**

ನೋಡ್ತಾ ಇರಿ. ಮುಂದಿನ ವರ್ಷನೂ ಇದೇ ಸಮಯದಲ್ಲಿ ಇದು ಮತ್ತೆ ವಕ್ಕರಿಸುತ್ತೆ.

**ಇನ್ಮುಂದೆ ವರ್ಷಕ್ಕೆ ಮೂರಲ್ಲ ನಾಲ್ಕು ಕಾಲಗಳು ಅಂತಾ ಹೇಳಬಹುದು.**

ಕಾಲ!? ಅಂದರೇ

**ಅದೇ! ಮಳೆಗಾಲ, ಚಳಿಗಾಲ, ಬೇಸಿಗೆಕಾಲ.**

ನಾಲ್ಕನೇದೂ!?

**ಕೊರೊನಾ ಕಾಲ!!**

ಅಷ್ಟೇ ಅಲ್ಲ. ಇದು ಕ್ಯೂ ಕಾಲ! ಎಣ್ಣೆ ತಗಳ್ಳೋಕು ಕ್ಯೂ....ಶವ ಸಂಸ್ಕಾರಕ್ಕೂ ಕ್ಯೂ....ಈಗ ಲಸಿಕೆ ಹಾಕಿಸ್ಕೊಳ್ಳೋಕೂ ಕ್ಯೂ! ಈ ಕೊರೊನಾ ಕಾಟಕ್ಕೆ ಸಾಕಾಗಿ ಹೋಗಿದೆ. ಇದು ಅಂಟಬಾರದು ಅಂದ್ರೆ ಏನು ಮಾಡಬೇಕು?

**ಚೆನ್ನಾಗಿ ತೊಳ್ಕೋಬೇಕು!**

ಏನನ್ನಾ!?

**ಕೈಯನ್ನಾ!**

ಅದನ್ನೇನೋ ತೊಳ್ಕೋಬಹುದು. ಎಲ್ಲದಕ್ಕಿಂತ ಮುಖ್ಯವಾಗಿ ನಾವು ಮಾಡಿದ ಪಾಪ ತೊಳ್ಕೋಬೇಕು. ಅದಕ್ಕೇನು ಮಾಡಬೇಕು?

**ಕುಂಭಮೇಳಕ್ಕೆ ಹೋಗಿ ಗಂಗಾ ನದೀಲಿ ಮುಳುಗು ಹಾಕಬೇಕು.**

ಗಂಗಾ ನದಿಯಲ್ಲಿ ಮುಳುಗಿ ಎದ್ದರೆ ನಮ್ಮ ಪಾಪ ತೊಳೆಯುತ್ತಾ?

**ಪಾಪ ಇದ್ರೆ ತೊಳಿಬಹುದು. ಆದರೆ, ಕೊರೊನಾ ಇದ್ರೆ....**

ಇದ್ದರೇ!?

**ನಾವೂ ತೇಲ್ತಿವಿ!!!**

# ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಕೋವಿಡ್ ಚಿಕಿತ್ಸೆ ಪಡೆಯಬೇಕು

ದಾವಣಗೆರೆ, ಮೇ 12 - ಕೋವಿಡ್ ರೋಗಿಗಳು ಸರ್ಕಾರಿ ಆಸ್ಪತ್ರೆಯಿಂದ ರೆಫರೆನ್ಸ್ ಪಡೆದು, ಎಬಿಎಆರ್‌ಕೆ ಯೋಜನೆಯಡಿ ಎಂಪಾನೆಲ್ ಆಗಿರುವ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ಪಡೆಯಬಹುದಾಗಿದ್ದು, ಕೋವಿಡ್ ಸೋಂಕಿತರು ಈ ಯೋಜನೆಯ ಉಪಯೋಗ ಪಡೆಯಬೇಕೆಂದು ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಮನವಿ ಮಾಡಿದರು.

ನಗರದ ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ಆಕ್ಸಿಜನ್ ಪೂರೈಕೆ ಮತ್ತು ಬೆಡ್‌ಗಳು ಮತ್ತು ಲಸಿಕೆ ನಿರ್ವಹಣೆ ಕುರಿತು ಚರ್ಚಿಸಲು ಇಂದು ಏರ್ಪಡಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ವತಿಯಿಂದ ಸರ್ಕಾರ ಜಾರಿಗೊಳಿಸಿರುವ ಎಬಿಎಆರ್‌ಕೆ ಯೋಜನೆಯಡಿ ನೋಂದಾಯಿಸಲ್ಪಟ್ಟ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸಾ ಸೌಲಭ್ಯವನ್ನು ಜನ ಸಾಮಾನ್ಯರು ಪಡೆಯಬೇಕೆಂದರು.

ಖಾಸಗಿ ಆಸ್ಪತ್ರೆಗಳಲ್ಲಿ ಶೇ.50 ಮತ್ತು ಮೆಡಿಕಲ್ ಕಾಲೇಜಿನ ಆಸ್ಪತ್ರೆಯಲ್ಲಿ ಶೇ.75 ಬೆಡ್‌ಗಳನ್ನು ಕೋವಿಡ್ ರೋಗಿಗಳಿಗೆ ಮೀಸಲಿಡಬೇಕೆಂಬ ನಿಯಮವಿದೆ. ಇದುವರೆಗೆ ಎಬಿಎಆರ್‌ಕೆಯಿಂದ ಖಾಸಗಿ ಆಸ್ಪತ್ರೆಗೆ ರೆಫರೆನ್ಸ್ ಪಡೆದು, ಕೇವಲ 64 ಜನರು ಮಾತ್ರ ಉಚಿತ ಚಿಕಿತ್ಸೆಯ ಸದುಪಯೋಗ ಪಡೆದಿದ್ದಾರೆ. ಸಿ.ಜಿ. ಆಸ್ಪತ್ರೆ ಹೊರತುಪಡಿಸಿ, ಖಾಸಗಿಯಲ್ಲಿ 1535 ಬೆಡ್‌ಗಳು ರೋಗಿಗಳಿಗೆ ನಿಗದಿ ಆಗಿದ್ದು, ಬಹಳಷ್ಟು ಜನರು ಈ ಯೋಜನೆಯನ್ನು ಬಳಕೆ ಮಾಡುತ್ತಿಲ್ಲ. ಆದ ಕಾರಣ ಸೋಂಕಿತರು ಇನ್ನು ಮುಂದೆ ಸರ್ಕಾರಿ ಆಸ್ಪತ್ರೆಯಲ್ಲಿ ರೆಫರೆನ್ಸ್ ಪಡೆದು, ಖಾಸಗಿ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ಪಡೆಯಬಹುದು. ಸರ್ಕಾರ ಖಾಸಗಿ ಆಸ್ಪತ್ರೆಗಳಿಗೆ ಚಿಕಿತ್ಸೆ ನೀಡಿದ ವೆಚ್ಚ ಭರಿಸುವುದು ಎಂದು ಅವರು ಮಾಹಿತಿ ನೀಡಿದರು.

**ಎಬಿಎಆರ್‌ಕೆ ರೆಫರೆನ್ಸ್ ನೀಡಲು ತಂಡ :** ಎಬಿಎಆರ್‌ಕೆ ಅಡಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ರೆಫರೆನ್ಸ್ ನೀಡಲು ಜಿಲ್ಲಾಸ್ಪತ್ರೆಯಲ್ಲಿ ಮೂರು ಪಾಳಿಯಲ್ಲಿ ಕೆಲಸ ಮಾಡುವ ವೈದ್ಯರು ಸೇರಿದಂತೆ 8 ಜನರ ಹೆಲ್ಪ್‌ಡೆಸ್ಕ್ ತಂಡ ರಚಿಸಲಾಗಿದೆ. ಇವರನ್ನು ಭೇಟಿ ಮಾಡಿ ಖಾಸಗಿ ಆಸ್ಪತ್ರೆ ದಾಖಲಾತಿಗೆ ಮುನ್ನ ರೆಫರೆನ್ಸ್ ಪಡೆಯಬೇಕು ಎಂದರು.

**ಸಿಸಿಸಿ ಐಸೋಲೇಷನ್ ಉತ್ತಮ :** ಪ್ರತಿಷ್ಠಿತ ಬಡಾವಣೆಗಳಲ್ಲಿಯೇ ಸೋಂಕು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದು, ಪ್ರತ್ಯೇಕ ಕೊಠಡಿ ಇತರೆ ವ್ಯವಸ್ಥೆ ಇದೆ ಎಂದು ಮನೆಯಲ್ಲಿಯೇ ಐಸೋಲೇಟ್ ಆಗುತ್ತಿದ್ದಾರೆ. ಆದರೆ, ಸಮರ್ಪಕವಾಗಿ ಐಸೋಲೇಷನ್ ನಿಯಮ ಪಾಲಿಸದೇ ಮನೆಯವರೆಲ್ಲಾ ಪಾಸಿಟಿವ್ ಆಗುತ್ತಿರುವುದು ಕಂಡು ಬಂದಿದೆ. ಆದ ಕಾರಣ ನಗರದ ತರಳಬಾಳು ಶ್ರೀಗಳು ಎಲ್ಲಾ ರೀತಿಯ ವ್ಯವಸ್ಥೆ ಇರುವ ತರಳಬಾಳು ಬಾಲಕಿಯರ ಹಾಸ್ಟೆಲ್‌ನ್ನು ಕೋವಿಡ್ ಆರೈಕೆ ಕೇಂದ್ರವಾಗಿಸಲು ನೀಡಿದ್ದು, ಇಲ್ಲಿ 90 ಜನರಿಗೆ ಅವಕಾಶವಿದೆ. ಇಲ್ಲಿ ಐಸೋಲೇಟ್ ಆಗುವ ಮೂಲಕ ಕೋವಿಡ್ ಸರಪಳಿಯನ್ನು ತುಂಡರಿಸಲು ಸಹಕರಿಸಬೇಕೆಂದು ಮನವಿ ಮಾಡಿದರು.

> **ಕಡಿಮೆ ಪಾಸಿಟಿವಿಟಿ ದರ ಪಟ್ಟಿಯಲ್ಲಿ ದಾವಣಗೆರೆ**
>
> ಕೇಂದ್ರ ಸರ್ಕಾರ ದೇಶದಲ್ಲಿ ಹೆಚ್ಚು ಪ್ರಕರಣ ಇರುವ 100 ಜಿಲ್ಲೆಗಳನ್ನು ಗುರುತಿಸಿದ್ದು, ಅದರಲ್ಲಿ 17 ಜಿಲ್ಲೆ ನಮ್ಮ ರಾಜ್ಯಕ್ಕೆ ಸೇರಿದ್ದವಾಗಿವೆ ಹಾಗೂ ಕಡಿಮೆ ಪಾಸಿಟಿವಿಟಿ ದರ ಇರುವ ಜಿಲ್ಲೆಗಳ ಪಟ್ಟಿಯಲ್ಲಿ ದಾವಣಗೆರೆ ಇರುವುದು ಅಭಿನಂದನೀಯ. ಹೀಗೆಯೇ ಜಿಲ್ಲಾಡಳಿತದೊಂದಿಗೆ ಎಲ್ಲರೂ ಸಹಕರಿಸುವ ಮೂಲಕ ಕೋವಿಡ್ ಚೈನ್ ಬ್ರೇಕ್ ಮಾಡಬೇಕು.
>
> **- ಜಿ.ಎಂ. ಸಿದ್ದೇಶ್ವರ, ಸಂಸದರು**

**ಆಕ್ಸಿಜನ್ ಕೊರತೆ ನೀಗಿಸಲು ಪ್ರಾಮಾಣಿಕ ಪ್ರಯತ್ನ :** ಪ್ರಸ್ತುತ ಜಿಲ್ಲೆಯಲ್ಲಿ ಸ್ವಲ್ಪ ಆಕ್ಸಿಜನ್ ಕೊರತೆ ಇರುವುದು ನಿಜ. ಪ್ರಸ್ತುತ 14 ಕೆ ಎಲ್ ಆಕ್ಸಿಜನ್ ಸರಬರಾಜಾಗುತ್ತಿದ್ದು, 23 ಕೆಎಲ್‌ಗೆ ಒತ್ತಾಯ ಮಾಡಲಾಗುತ್ತಿದೆ. ಆಕ್ಸಿಜನ್ ಸಮಸ್ಯೆಯನ್ನು ಪರಿಹರಿಸಲು ಕೇಂದ್ರದ ಸಚಿವರು ಹಾಗೂ ಮುಖ್ಯಮಂತ್ರಿಗಳು, ಆರೋಗ್ಯ ಸಚಿವರೊಂದಿಗೆ ಮಾತನಾಡಿದ್ದೇನೆ ಎಂದು ಸಂಸದರು ತಿಳಿಸಿದರು.

ನಗರದ ಕೆಲವು ಖಾಸಗಿ ಆಸ್ಪತ್ರೆಗಳಲ್ಲಿ ತಮ್ಮಲ್ಲಿ ರೆಮಿಡಿಸಿವಿರ್ ಲಸಿಕೆ ಇಲ್ಲ. ಜಿಲ್ಲಾಧಿಕಾರಿಗಳ ಬಳಿ ಹೋಗಿ ಕೇಳಿದರೆ ನೀಡುತ್ತಾರೆಂದು ಕಳುಹಿಸಿದ್ದಾರೆ ಹಾಗೂ ಆಕ್ಸಿಜನ್ ಇಲ್ಲ. ನೀವೇ ವ್ಯವಸ್ಥೆ ಮಾಡಿದರೆ ಚಿಕಿತ್ಸೆ ನೀಡುತ್ತೇವೆಂದು ರೋಗಿಗಳ ಕಡೆಯವರಿಗೇ ವ್ಯವಸ್ಥೆ ಮಾಡಲು ತಿಳಿಸಿರುವುದು ಗಮನಕ್ಕೆ ಬಂದಿದೆ. ಹೀಗೆ ರೋಗಿಗಳ ಬಳಿಯೇ ವ್ಯವಸ್ಥೆ ಮಾಡಿಸುವುದಾದರೆ ಖಾಸಗಿ ಆಸ್ಪತ್ರೆಗಳ ಪಾತ್ರವೇನು? ಇನ್ನು ಮುಂದೆ ಈ ರೀತಿ ಮಾಡುವುದು ನನ್ನ ಗಮನಕ್ಕೆ ಬಂದರೆ, ಕಠಿಣ ಕ್ರಮ ಜರುಗಿಸ ಲಾಗುವುದು ಎಂದು ಎಚ್ಚರಿಸಿದರು.

**ಇಎಸ್‌ಐ ಆಸ್ಪತ್ರೆಯಲ್ಲಿ ವ್ಯವಸ್ಥೆ :** ಇಎಸ್‌ಐ ಆಸ್ಪತ್ರೆಯಲ್ಲಿ 50 ಆಕ್ಸಿಜನ್ ಬೆಡ್‌ಗಳ ವ್ಯವಸ್ಥೆ ಮಾಡಲಾಗಿದ್ದು, ಇಂದಿನಿಂದಲೇ ರೋಗಿಗಳನ್ನು ಅಲ್ಲಿಗೆ ಸ್ಥಳಾಂತರಿಸಬಹುದು. ಸಿ.ಜಿ.ಆಸ್ಪತ್ರೆಯ ರೂಂ ಸಂಖ್ಯೆ 65 ಮತ್ತು 66 ರಲ್ಲಿ ಸ್ಟೆಪ್‌ಡೌನ್ ವಾರ್ಡ್ ಮಾಡಿ, ಬೆಡ್‌ಗಳ ಸಂಖ್ಯೆ ಹೆಚ್ಚಿಸಲಾಗಿದೆ. ಮುಂದೆ ಆಕ್ಸಿಜನ್ ಲಭ್ಯತೆ ಹೆಚ್ಚಾದಲ್ಲಿ ಬೆಡ್‌ಗಳ ಸಂಖ್ಯೆಯನ್ನೂ ಸಹ ಹೆಚ್ಚಿಸಲಾಗುವುದು ಎಂದರು.

**ತಾಲ್ಲೂಕುಗಳಲ್ಲಿ ಸಿಸಿಸಿ ಬಳಕೆ ಮಾಡಿಕೊಳ್ಳಿರಿ :** ತಾಲ್ಲೂಕುಗಳಲ್ಲಿನ ಕೋವಿಡ್ ಕೇರ್ ಸೆಂಟರ್‌ಗಳ ಬಳಕೆಯನ್ನು ಜನರು ಮಾಡಿಕೊಳ್ಳಬೇಕು. ಹೋಂ ಐಸೋಲೇಷನ್ ಸಮರ್ಪಕವಾಗಿ ಮಾಡಿಕೊಳ್ಳದಿದ್ದರೆ, ಮನೆಯವರೆಲ್ಲಾ ಪಾಸಿಟಿವ್ ಆಗುತ್ತಾರೆ. ಆದ ಕಾರಣ ಸಿಸಿಸಿ ಬಳಕೆ ಮಾಡಿಕೊಳ್ಳಬೇಕು ಎಂದರು.

ಸಭೆಯಲ್ಲಿ ಸುಕ್ಷೇಮ, ಸುಚೇತನ, ಆರೈಕೆ, ಆಶ್ರಯ ಸೇರಿದಂತೆ ಕೋವಿಡ್ ಚಿಕಿತ್ಸೆ ನೀಡುವ ಆಸ್ಪತ್ರೆಯ ವೈದ್ಯರು ತಮ್ಮ ಆಸ್ಪತ್ರೆಗಳಲ್ಲಿ ಪ್ರಸ್ತುತ ಆಕ್ಸಿಜನ್ ಕೊರತೆ ಇದ್ದು, ತಮಗೆ ಇಂತಿಷ್ಟು ಆಕ್ಸಿಜನ್ ನೀಡಲಾಗುವುದು ಎಂದು ನಿಗದಿಗೊಳಿಸಬೇಕೆಂದು ಮನವಿ ಮಾಡಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಪ್ರತಿಕ್ರಿಯಿಸಿ, ಇತ್ತೀಚೆಗೆ ಜಿಲ್ಲಾಸ್ಪತ್ರೆಯಲ್ಲಿ ಉಂಟಾದ ಆಕ್ಸಿಜನ್ ಕ್ರೈಸಿಸ್‌ನಿಂದ ಸ್ವಲ್ಪ ವ್ಯತ್ಯಯವಾಗಿದೆ. ಇನ್ನು ಮೂರು - ನಾಲ್ಕು ದಿನಗಳಲ್ಲಿ ಇದು ಸರಿ ಹೋಗಲಿದ್ದು, ಮುಂದಿನ ದಿನಗಳಲ್ಲಿ ಯಾವುದೇ ತೊಡಕಿಲ್ಲದೆ ನಿರಂತರ ಆಕ್ಸಿಜನ್ ಪೂರೈಕೆ ಮಾಡುವ ಭರವಸೆ ನೀಡಿದರು.

ಸಭೆಯಲ್ಲಿ ಮಹಾಪೌರ ಎಸ್.ಟಿ. ವಿರೇಶ್, ಎಡಿಸಿ ಪೂಜಾರ್ ವೀರಮಲ್ಲಪ್ಪ, ಜಿ.ಪಂ ಉಪ ಕಾರ್ಯದರ್ಶಿ ಆನಂದ್, ಡಿಹೆಚ್‌ಓ ಡಾ. ನಾಗರಾಜ್, ಡಿ.ಎಸ್. ಡಾ.ಜಯಪ್ರಕಾಶ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ರಾಘವನ್, ಆರ್‌ಸಿಹೆಚ್‌ಓ ಡಾ.ಮೀನಾಕ್ಷಿ, ಡಾ.ಮುರಳೀಧರ ಮತ್ತಿತರರು ಉಪಸ್ಥಿತರಿದ್ದರು.

## ವಿಶ್ವ ದಾದಿಯರ ದಿನಾಚರಣೆ



ಮೇ 12ರ ವಿಶ್ವ ದಾದಿಯರ ದಿನಾಚರಣೆ ಹಿನ್ನೆಲೆಯಲ್ಲಿ ದಾವಣಗೆರೆಯ ವರದಿಗಾರರ ಕೂಟದಲ್ಲಿ ಬುಧವಾರ ಏರ್ಪಾಡಾಗಿದ್ದ ಲಸಿಕೆ ವಿತರಣೆ ಕಾರ್ಯಕ್ರಮದ ಸಂದರ್ಭದಲ್ಲಿ ಮಹಾಂತೇಶ್ ಬೀಳಗಿ ಅವರು ಜಿಲ್ಲಾ ಚಿಗಟೇರಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯ ಶುಶ್ರೂಷಕಿಯರಿಗೆ ಪುಷ್ಪ ಗುಚ್ಛ ನೀಡುವುದರ ಮೂಲಕ ಶುಭ ಹಾರೈಸಿದರು.

## ಹರಿಹರ : ನದಿ ಸೇತುವೆಗೆ ಬ್ಯಾರಿಕೇಡ್



ಹರಿಹರ, ಮೇ 12- ಕುಮಾರಪಟ್ಟಣಂ ಕಾರ್ಖಾನೆಗೆ ಮತ್ತು ಈ ಭಾಗದಲ್ಲಿ ಬರುವ ಹಲವಾರು ಗ್ರಾಮಗಳಿಗೆ ಸಂಚಾರ ಮಾಡುವುದಕ್ಕೆ ನಗರದ ತುಂಗಭದ್ರಾ ನದಿಯ ಸೇತುವೆಯ ಮೇಲೆ ಸಾರ್ವಜನಿಕರು ಹಾದುಹೋಗ ಬೇಕಾಗಿರುವುದರಿಂದ ಇಲ್ಲಿನ ತುಂಗಭದ್ರಾ ನದಿಯ ಪಕ್ಕದ ಎರಡು ಸೇತುವೆಯ ಮೇಲೆ ಸಾರ್ವಜನಿಕರು ಓಡಾಡದಂತೆ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ ಮತ್ತು ಪೊಲೀಸ್ ಬ್ಯಾರಿಕೇಡ್ ಹಾಕಿ ಓಡಾಟಕ್ಕೆ ನಿರ್ಬಂಧ ಹಾಕಲಾಗಿದೆ. ಇದರಿಂದಾಗಿ ಈ ಸೇತುವೆಯ ಮೇಲೆ ಪ್ರತಿದಿನ ಸಾವಿರಾರು ಸಂಖ್ಯೆಯಲ್ಲಿ ಓಡಾಡುವ ಸಾರ್ವಜನಿಕರು ಸೇತುವೆಯವರೆಗೆ ಬಂದು ವಾಪಾಸ್ ತಮ್ಮ ತಮ್ಮ ಊರಿಗೆ ಮರಳಿದರು. ಇನ್ನೂ ಕೆಲವರು ಆಸ್ಪತ್ರೆಗೆಂದು, ಅಗತ್ಯ ವಸ್ತುಗಳನ್ನು ಸಾಗಿಸಲು ಎಂದು ಗುರುತಿನ ಚೀಟಿಯನ್ನು ತೋರಿಸುವ ಮೂಲಕ ಸೇತುವೆಯನ್ನು ದಾಟಿ ತಮ್ಮ ಗ್ರಾಮಗಳಿಗೆ ತೆರಳಿದರು.

## 'ಭಾರತದ ರೂಪಾಂತರಿ' ಲಸಿಕೆ ಎಂದು ಡಬ್ಲ್ಯೂ.ಹೆಚ್.ಓ. ಹೇಳಿಲ್ಲ : ಕೇಂದ್ರ

ನವದೆಹಲಿ, ಮೇ 12 - ಕೊರೊನಾದ ಬಿ.1.617 ರೂಪಾಂತರಿಯನ್ನು ಭಾರತದ ರೂಪಾಂತರಿ ಎಂದು ಹೇಳುತ್ತಿರುವುದಕ್ಕೆ ಆಕ್ಷೇಪಿಸಿರುವ ಕೇಂದ್ರ ಆರೋಗ್ಯ ಸಚಿವಾಲಯ, ವಿಶ್ವ ಆರೋಗ್ಯ ಸಂಘಟನೆ ತನ್ನ ದಾಖಲೆಯಲ್ಲಿ ಈ ರೀತಿ ಹೇಳಿಲ್ಲ ಎಂದು ತಿಳಿಸಿದೆ.

ಬಿ.1.617 ರೂಪಾಂತರಿಯನ್ನು ಆಧಾರ ರಹಿತವಾಗಿ ಭಾರತದ ರೂಪಾಂತರಿ ಎಂದು ಹೇಳಲಾಗುತ್ತಿದೆ ಎಂದು ಸಚಿವಾಲಯ ಹೇಳಿದೆ. ಈ ರೂಪಾಂತರಿ ಜಾಗತಿಕ ಕಳವಳ ಎಂದು ವಿಶ್ವ ಆರೋಗ್ಯ ಸಂಘಟನೆ ತಿಳಿಸಿತ್ತು.

## ಜಿಲ್ಲೆಯಲ್ಲಿ 362 ಸೋಂಕಿತರು ಪತ್ತೆ

**(1ನೇ ಪುಟದಿಂದ)** ಇದೇ ದಿನ 326 ಜನ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ.

ಜಿಲ್ಲೆಯಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 3,243ಕ್ಕೆ ತಲುಪಿದೆ. ದಾವಣಗೆರೆ ತಾಲ್ಲೂಕಿನಲ್ಲಿ 193, ಹರಿಹರದಲ್ಲಿ 41, ಜಗಳೂರಿನಲ್ಲಿ 4, ಚನ್ನಗಿರಿಯಲ್ಲಿ 61 ಹಾಗೂ ಹೊನ್ನಾಳಿಯಲ್ಲಿ 53 ಸೋಂಕಿತರು ಕಂಡು ಬಂದಿದ್ದಾರೆ. ಹೊರ ಜಿಲ್ಲೆಗಳ 10 ಸೋಂಕಿತರು ಬುಧವಾರ ಕಂಡು ಬಂದಿದ್ದಾರೆ. ದಾವಣಗೆರೆಯ ವ್ಯಕ್ತಿ ಯೊಬ್ಬರು ಕೊರೊನಾದಿಂದ ಸಾವನ್ನಪ್ಪಿದ್ದಾರೆ.

## ಲಸಿಕೆ ಪಡೆಯಲು ಸರ್ವರ್ ಅಡ್ಡಿ

**ಹೊನ್ನಾಳಿ**

ಹೊನ್ನಾಳಿ, ಮೇ 11- ಕೊರೊನಾ ಲಸಿಕೆ ಪಡೆದುಕೊಳ್ಳಲು ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಂಡಿದ್ದ ಅನೇಕರು ಮಂಗಳವಾರ ಹೊನ್ನಾಳಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಲಸಿಕೆ ಲಭಿಸದೇ ನಿರಾಸೆ ಅನುಭವಿಸಿದರು.

ಆನ್‌ಲೈನ್‌ನಲ್ಲಿ ನೋಂದಣಿ ಆಗಿದ್ದರೂ ಲಸಿಕೆ ಹಂಚಿಕೆ ಕುರಿತಂತೆ ಸ್ಪಷ್ಟ ಸಂದೇಶ ಬಾರದ ಹಿನ್ನೆಲೆಯಲ್ಲಿ ಸಾರ್ವಜನಿಕ ಆಸ್ಪತ್ರೆಯ ವೈದ್ಯರು ಲಸಿಕೆ ನೀಡಲು ಸಾಧ್ಯವಾಗಲಿಲ್ಲ. ಸರ್ವರ್ ಡೌನ್ ಆಗಿದ್ದುದು ಇದಕ್ಕೆ ಕಾರಣ ಎನ್ನುವ ಉತ್ತರ ಸಾರ್ವಜನಿಕರಿಗೆ ಲಭಿಸಿತು.

ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಲಸಿಕಾ ಕೇಂದ್ರ ಯಾವ ಊರಿಗೆ ಬೇಕಾದರೂ ಅಲಾಟ್ ಆಗಬಹುದಾಗಿದ್ದು. ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಸಿಕೊಂಡಿದ್ದ ಬೆಂಗಳೂರಿನ ಅನೇಕ ನಿವಾಸಿಗಳು ಹೊನ್ನಾಳಿಯ ಸಾರ್ವಜನಿಕ ಆಸ್ಪತ್ರೆಗೆ ಕಾರ್‌ಗಳಲ್ಲಿ ಆಗಮಿಸಿದ್ದರು. ಗಂಟೆಗಟ್ಟಲೇ ಕಾದರೂ ಲಸಿಕೆ ದೊರೆಯದ ಕಾರಣ ನಿರಾಸೆಯಿಂದ ಮನೆಗಳಿಗೆ ತೆರಳಿದರು ಎಂದು ಹೊನ್ನಾಳಿಯ ಸಾರ್ವಜನಿಕ ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಚಂದ್ರಪ್ಪ ತಿಳಿಸಿದರು.

# ಬ್ಯಾಂಕ್ ಉದ್ಯೋಗಿಗಳ ಸಂಚಾರಕ್ಕೆ ಅಡ್ಡಿ ಮಾಡದಿರುವಂತೆ ಎಸ್ಪಿಗೆ ಮನವಿ



ದಾವಣಗೆರೆ, ಮೇ 12- ಲಾಕ್‌ಡೌನ್ ಅವಧಿಯಲ್ಲಿ ಅಗತ್ಯ ಸೇವಾ ಪೂರೈಕೆ ವಲಯದಲ್ಲಿ ಬರುವ ಬ್ಯಾಂಕ್ ಉದ್ಯೋಗಿಗಳು ಮನೆಯಿಂದ ಕಛೇರಿಗೆ ಮತ್ತು ಕಛೇರಿಯಿಂದ ಮನೆಗೆ ಸಂಚರಿಸಲು ಪೊಲೀಸ್ ಇಲಾಖೆಯಿಂದ ಅಡೆತಡೆಗಳಾಗದಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಜಿಲ್ಲಾ ಬ್ಯಾಂಕ್ ಉದ್ಯೋಗಿಗಳ ಸಂಘಟನೆಗಳು ಮನವಿ ಸಲ್ಲಿಸಿವೆ.

ಕೆಲವು ಕಡೆ ಬ್ಯಾಂಕ್ ಉದ್ಯೋಗಿಗಳ ಸಂಚಾರಕ್ಕೆ ಪೊಲೀಸರು ಅಡ್ಡಿ ಮಾಡುತ್ತಿದ್ದು, ಖಾಸಗಿ ವಾಹನ ಬಳಸಲಾರದ ಉದ್ಯೋಗಿಗಳು ಮತ್ತು ದಿವ್ಯಾಂಗ ಉದ್ಯೋಗಿಗಳು ಆಟೋ ರಿಕ್ಷಾವನ್ನು ಅವಲಂಬಿಸಿದ್ದಾರೆ. ಅವರಿಗೂ ಅಡ್ಡಿ ಮಾಡಲಾಗುತ್ತಿದೆ. ಇದರಿಂದ ಬ್ಯಾಂಕ್ ಉದ್ಯೋಗಿಗಳು ಆತಂಕಕ್ಕೊಳಗಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಜಿಲ್ಲಾ ಬ್ಯಾಂಕ್ ನೌಕರರ ಸಂಘ ಹಾಗೂ ಬ್ಯಾಂಕ್ ಅಧಿಕಾರಿಗಳ ಸಂಘಟನೆಯ ವತಿಯಿಂದ ಎಸ್ಪಿ ಹನುಮಂತರಾಯ ಅವರನ್ನು ಇಂದು ಭೇಟಿಯಾಗಿ ಮನವಿ ಸಲ್ಲಿಸಲಾಯಿತು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಕೆ. ರಾಘವೇಂದ್ರ ನಾಯರಿ ತಿಳಿಸಿದ್ದಾರೆ.

ಬ್ಯಾಂಕ್ ಉದ್ಯೋಗಿಗಳ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಎಸ್ಪಿ ಮಾತನಾಡಿ, ಕರ್ತವ್ಯ ನಿರತ ಬ್ಯಾಂಕ್ ಉದ್ಯೋಗಿಗಳ ಸಂಚಾರಕ್ಕೆ ಅಡ್ಡಿ ಮಾಡುವುದಿಲ್ಲ. ಆದರೆ, ಅವರು ಬ್ಯಾಂಕ್ ಗುರುತಿನ ಚೀಟಿಯನ್ನು ತಪಾಸಣೆಯ ಸಂದರ್ಭದಲ್ಲಿ ಅಗತ್ಯವಾಗಿ ಹಾಜರುಪಡಿಸಬೇಕು ಎಂದು ಹೇಳಿದರು.

ಈ ಸಂಬಂಧ ಕೂಡಲೇ ಸಂದೇಶ ರವಾನೆ ಮಾಡಿ, ಬ್ಯಾಂಕ್, ವಿಮೆ, ಅಂಚೆ, ದೂರಸಂಪರ್ಕ ಮುಂತಾದ ವಿಭಾಗಗಳ ಉದ್ಯೋಗಿಗಳ ಕರ್ತವ್ಯ ನಿರ್ವಹಣೆಯ ಸಂಚಾರಕ್ಕೆ ಅಡ್ಡಿ ಮಾಡಬಾರದೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಎಸ್ಪಿ ಸೂಚನೆ ನೀಡಿದರು.

ಬ್ಯಾಂಕ್ ಅಧಿಕಾರಿಗಳ ಸಂಘದ ಆನಂದಮೂರ್ತಿ, ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಬಿ.ಆನಂದ ಮೂರ್ತಿ, ಪ್ರದಾನ ಕಾರ್ಯದರ್ಶಿ ಕೆ.ರಾಘವೇಂದ್ರ ನಾಯರಿ, ಖಜಾಂಚಿ ಕೆ.ವಿಶ್ವನಾಥ್ ಬಿಲ್ಲವ ಹಾಜರಿದ್ದರು.

### ಲಸಿಕೆ ಪಡೆಯಲು ಜನರ ಸಾಲು ಸಾಲು

## 2ನೇ ಲಸಿಕೆ ಪಡೆವ ಅವಧಿ ಮುಗಿದಿರುವ ಆತಂಕ



ದಾವಣಗೆರೆ, ಮೇ 12- ಲಸಿಕೆ ಪಡೆಯಲು ಇಂದೂ ಸಹ ಜಿಲ್ಲಾಸ್ಪತ್ರೆ ಆವರಣದಲ್ಲಿನ ಲಸಿಕಾ ಕೇಂದ್ರದ ಬಳಿ ಸಾಲು ಸಾಲಾಗಿ ಸಾರ್ವಜನಿಕರು ಕಾದು ನಿಂತಿದ್ದರು. ಈ ಪೈಕಿ 2ನೇ ಲಸಿಕೆಯ ಅವಧಿ ಮುಗಿದಿರುವ ಬಗ್ಗೆ ಸಂದೇಶ ಬಂದಿದೆ ಎಂಬುದಾಗಿ ಮೊದಲ ಲಸಿಕೆ ಪಡೆದು ಎರಡನೇ ಲಸಿಕೆ ತೆಗೆದುಕೊಳ್ಳುವ ಪಡೆಯಲು ಬಂದಿದ್ದ ಜನರು ಸಂಬಂಧಿಸಿದ ಇಲಾಖೆ ಅಧಿಕಾರಿಗಳ ಬಳಿ ಆತಂಕ ವ್ಯಕ್ತಪಡಿಸಿದರು.

ಮಾಹಿತಿ ಫಲಕ ಕನ್ನಡದಲ್ಲಿ ಹಾಕಿ. ಎರಡನೇ ಲಸಿಕೆ. ಅವಧಿ ಮುಗಿದಿದೆ. ಅದರ ಮೆಸೇಜ್ ಬಂದಿದೆ. ಏನು ಮಾಡಬೇಕು. ಯಾರಿಗೆ ಕೇಳಬೇಕು. ಕೋವ್ಯಾಕ್ಸಿನ್ ಯಾವಾಗ ಬರುತ್ತದೆ ಎಂಬುದಾಗಿ ಲಸಿಕೆ ಪಡೆಯಲು ಆಗಮಿಸಿದ ಜನರು ಪ್ರಶ್ನೆಗಳ ಸುರಿಮಳೆಗೈದರು.

ಈ ಎಲ್ಲಾ ಪ್ರಶ್ನೆಗಳ ಆಲಿಸಿದ ಲಸಿಕಾ ಕೇಂದ್ರದ ಉಸ್ತುವಾರಿ ವಹಿಸಿರುವ ಸಿದ್ದರಾಮೇಶ್ ಅವರು ಸಮಜಾಯಿಷಿ ನೀಡಿದರು.

ಲಸಿಕಾ ಕೇಂದ್ರಕ್ಕೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಭೇಟಿ ಕೊಟ್ಟು ಜನರಿಗೆ ಲಸಿಕೆ ಬಗ್ಗೆ ತಿಳುವಳಿಕೆ ಮೂಡಿಸಿದರು. ಹೀಗೆ ಜನಜಂಗುಳಿ ಇದ್ದರೆ 18 ವರ್ಷದ ಮೇಲ್ಪಟ್ಟವರಿಗೆ ಭಯವಾಗುವುದಿಲ್ಲವೇ ಎಂದು ಕೇಳಿದರು.

ನನ್ನ ತಾಯಿಗೆ ಎರಡನೇ ಲಸಿಕೆ ಸಿಗುತ್ತಿಲ್ಲ. ಒಂದು ಹಳ್ಳಿಯಲ್ಲಿ ಇದೆ ಬುಕ್ ಮಾಡಿ ಎಂದಾಗ ಹೋದರೆ ಅಲ್ಲಿ ಇಲ್ಲವೆಂದು ಕಳಿಸಿದರು ಎಂದು ಯುವಕನೋರ್ವ ಜಿಲ್ಲಾಧಿಕಾರಿ ಬಳಿ ಅಳಲಿಟ್ಟನು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು, ಅಲ್ಲಿಗೆಲ್ಲಾ ಹೋಗಬೇಡಿ. ಮೊದಲು ಕೈ ಮುಗಿದು ಕರೆದರೂ ಯಾರೂ ಲಸಿಕೆ ಪಡೆಯಲು ಬಂದಿಲ್ಲ. ನಗರ ದೊಡ್ಡದಾಗಿದೆ. ಖಂಡಿತಾ ಸೂಕ್ತ ವ್ಯವಸ್ಥೆ ಮಾಡೋಣ. ಆನ್‌ಲೈನ್ ನೋಂದಣಿ ಮಾಡಿ ಬನ್ನಿ ಎಂದು ತಿಳಿಸಿದ್ದಾರೆ.

## 18ರ ಲಸಿಕೆಗೆ ರಾಜ್ಯದಲ್ಲಿ ತಡೆ

**(1ನೇ ಪುಟದಿಂದ)** ತಕ್ಷಣ ಜನರಿಗೆ ನೀಡಲಾಗುವುದು ಎಂದು ತಿಳಿಸಿದ್ದಾರೆ. ಈ ನಡುವೆ, ಸರ್ಕಾರ ಲಸಿಕೆ ಪೂರೈಸಲು ಅಸಮರ್ಥವಾಗಿರುವ ಹಾಗೂ ಕೊರೊನಾ ಪರಿಸ್ಥಿತಿ ನಿಭಾಯಿಸುವುದು ಕಳಪೆಯಾಗಿರುವುದರ ವಿರುದ್ಧ ಕಾಂಗ್ರೆಸ್ ನಾಯಕರಾದ ಸಿದ್ದರಾಮಯ್ಯ ಹಾಗೂ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಧರಣಿ ನಡೆಸಿದ್ದಾರೆ.

## ನಗರಕ್ಕೆ ಇಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್

ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ. ಸಚಿವರು ಬೆಳಿಗ್ಗೆ 10 ಕ್ಕೆ ಪ್ರವಾಸಿ ಮಂದಿರ (ಸರ್ಕ್ಯೂಟ್ ಹೌಸ್) ಕ್ಕೆ ಆಗಮಿಸುವರು. ಬಳಿಕ 10.30 ಕ್ಕೆ ಕೋವಿಡ್-19 ನಿಯಂತ್ರಣದ ಕುರಿತು ಜಿಲ್ಲೆಯ ಸಂಸದರು, ಶಾಸಕರು ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಜಿಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಭೆ ನಡೆಸಲಿದ್ದಾರೆ. ಮಧ್ಯಾಹ್ನ 2.30 ಕ್ಕೆ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಕೋವಿಡ್ ನಿರ್ವಹಣೆ ಕುರಿತಂತೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಚರ್ಚೆ ನಡೆಸುವರು. ಸಂಜೆ 5.30 ಕ್ಕೆ ನಿರ್ಗಮಿಸುವರು.

## ಕೊಟ್ಟೂರು : ಅಧಿಕಾರಿಗಳಿಂದ ಕೋವಿಡ್ ಆಸ್ಪತ್ರೆ ಪರಿಶೀಲನೆ



ಕೊಟ್ಟೂರು, ಮೇ 12- ಕೊಟ್ಟೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಾರಂಭಿಸಿರುವ ಕೋವಿಡ್ ಆಸ್ಪತ್ರೆಯನ್ನು ತಹಶೀಲ್ದಾರ್ ಜಿ. ಅನಿಲ್‌ಕುಮಾರ್ ಹಾಗೂ ತಾಲ್ಲೂಕು ಆರೋಗ್ಯ ಅಧಿಕಾರಿಗಳಾದ ಡಾ. ಷಣ್ಮುಖನಾಯ್ಕ್ ವೀಕ್ಷಣೆ ಮಾಡಿ ಪರಿಶೀಲಿಸಿದರು.

ಸದರಿ ಆಸ್ಪತ್ರೆಯಲ್ಲಿ 15 ಬೆಡ್‌ಗಳಿದ್ದು, ಎಲ್ಲಾ ಬೆಡ್‌ಗಳಿಗೆ ಆಕ್ಸಿಜನ್ ವ್ಯವಸ್ಥೆ ಕಲ್ಪಿಸಲಾಗಿದೆ. ಆಸ್ಪತ್ರೆಯಲ್ಲಿ ದಾಖಲಾದ ರೋಗಿಗಳ ಆರೋಗ್ಯದ ಬಗ್ಗೆ, ಆಸ್ಪತ್ರೆಯಲ್ಲಿ ರೋಗಿಗಳಿಗೆ ನೀಡುತ್ತಿರುವ ಚಿಕಿತ್ಸೆಯ ಬಗ್ಗೆ ಅಧಿಕಾರಿಗಳು ವಿಚಾರಿಸಿ ಅವರಿಗೆ ಆತ್ಮಸ್ಥೈರ್ಯ ತುಂಬಿದರು.

## ಮಾರುಕಟ್ಟೆಯತ್ತ ಜಿಲ್ಲಾಧಿಕಾರಿ ಹೆಜ್ಜೆ

**(1ನೇ ಪುಟದಿಂದ)** ವಾಟು ನಡೆಸುತ್ತಿದ್ದದ್ದು, ಅಗತ್ಯ ವಸ್ತುಗಳು ಮನೆಗಳ ಬಳಿಯೇ ಸಿಗುತ್ತವೆ. ಆದರೆ, ಜನರಿಗೆ ಮಾತ್ರ ಮನೆ ಮುಂದೆ ಬರುವ ಗಾಡಿಗಳು, ಮನೆಯ ಬಳಿ ಇರುವ ಅಂಗಡಿ ಗಳಲ್ಲಿ ಖರೀದಿಸುವುದಕ್ಕಿಂತಲೂ ಮಾರುಕಟ್ಟೆಗೆ ಚೀಲ ಹಿಡಿದುಕೊಂಡು ಬಂದು ಖರೀದಿಸಿ ದರಷ್ಟೇ ಸಮಾಧಾನವೇನೋ ಎಂಬಂತೆ ವರ್ತಿಸುತ್ತಿದ್ದುದು, ಸಾಮಾಜಿಕ ಅಂತರ ಕಾಣದಿದ್ದದ್ದು ಕಂಡು ಬಂತು.

ಆಗ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಬೇಸರ ವ್ಯಕ್ತಪಡಿಸಿದರಲ್ಲದೇ ವ್ಯಾಪಾರಸ್ಥರು, ಜನರಿಗೆ ತರಾಟೆಗೆ ತೆಗೆದುಕೊಂಡರು. ಸಾಮಾಜಿಕ ಅಂತರ, ಮಾಸ್ಕ್ ಧರಿಸುವಂತೆ ಹೇಳುತ್ತಿದ್ದರೂ ಅದನ್ನು ಲೆಕ್ಕಿಸುತ್ತಿಲ್ಲ.

ಲಾಕ್‌ಡೌನ್‌ನಲ್ಲೂ ಹೀಗೆ ಮುಂದುವರೆದರೆ ಕೊರೊನಾ ಸೋಂಕು ಕಳಚುವುದು ಹೇಗೆ ಎಂದು ಜಿಲ್ಲಾಧಿಕಾರಿಗಳು ಪ್ರಶ್ನಿಸಿದರು. ಅಲ್ಲದೇ ವ್ಯಾಪಾರ-ವಹಿವಾಟು ನಡೆಸದಂತೆ ಅಲ್ಲಿಂದ ಜಾಗ ಖಾಲಿ ಮಾಡುವಂತೆ ತಳ್ಳುವ ಗಾಡಿ ವ್ಯಾಪಾರಸ್ಥರಿಗೆ ಸೂಚಿಸಿದರು.

ಮತ್ತೊಂದು ಕಡೆ ಕೊರೊನಾ ಸೋಂಕಿತರಿಗೆ ಚಿಕಿತ್ಸೆ, ಬೆಡ್, ಆಕ್ಸಿಜನ್ ಬೆಡ್ ಒದಗಿಸುವುದೇ ಜಿಲ್ಲಾಡಳಿತಕ್ಕೆ ಸವಾಲಾಗಿದೆ ಎಂದರು.

## ಹೊನ್ನಾಳಿ - ನ್ಯಾಮತಿ ತಾಲ್ಲೂಕಿನಲ್ಲಿ ಶೇ. 53ರಷ್ಟು ಲಸಿಕೆ

ಹೊನ್ನಾಳಿ, ಮೇ 12- ಹೊನ್ನಾಳಿ ಹಾಗೂ ನ್ಯಾಮತಿ ತಾಲ್ಲೂಕುಗಳಿಂದ 59,957 ಕೋವಿಡ್ ಲಸಿಕೆ ಹಾಕುವ ಗುರಿಯಿದ್ದು 35,935 ಜನತೆಗೆ ಲಸಿಕೆ ಹಾಕುವ ಮೂಲಕ ಶೇ. 53ರಷ್ಟು ಗುರಿ ಸಾಧನೆಯಾಗಿದೆ ಎಂದು ತಾಲ್ಲೂಕು ಆಡಳಿತ ತಿಳಿಸಿದೆ. 45 ವರ್ಷ ಮೇಲ್ಪಟ್ಟವರು 25,005 ಜನತೆಗೆ ಲಸಿಕೆ ನೀಡಿದ್ದು ಇದರಲ್ಲಿ ಎರಡನೇ ಡೋಸ್ 5,502 ಜನತೆ ಪಡೆದಿದ್ದು 18 ವರ್ಷ ಮೇಲ್ಪಟ್ಟ ಜನರಿಗೆ ಲಸಿಕೆ ನೀಡಲಾಗಿದೆ ಎಂದು ಆರೋಗ್ಯಾಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

## ಜಿಲ್ಲಾಡಳಿತ ಎಸ್ಸೆಸ್ಸೆಂ ಮಾರ್ಗದರ್ಶನ ಪಡೆಯಲಿ

**ದಿನೇಶ್ ಕೆ.ಶೆಟ್ಟಿ**

ದಾವಣಗೆರೆ, ಮೇ 12- ರೆಸಾರ್ಟ್‌ಗೆ ಹೋದಂತೆ ದಾವಣಗೆರೆ ಜಿಲ್ಲೆಗೆ ಬಂದು-ಹೋಗುವ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್ ಅವರಿಗೆ ಮಾಜಿ ಮುಖ್ಯಮಂತ್ರಿ ಎಸ್.ಸಿದ್ದರಾಮಯ್ಯನವರ ಬಗ್ಗೆ ಮಾತನಾಡಲು ನೈತಿಕತೆ ಇಲ್ಲ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಹೇಳಿದ್ದಾರೆ.

ಸಚಿವ ಬಸವರಾಜ್ ಅವರು 15 ದಿನ, ತಿಂಗಳಿಗೊಮ್ಮೆ ನಗರಕ್ಕೆ ಬಂದು ಕೋವಿಡ್ ಸೆಂಟರ್ ಒಳಗೂ ಹೋಗದೇ ಮಾಧ್ಯಮಗಳಿಗೆ ಪೋಟೋ ಪೋಸ್ ನೀಡಿ, ಅಧಿಕಾರಿಗಳ ಸಭೆ ನಡೆಸಲು ಸೀಮಿತರಾಗಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.

ಅಧಿಕಾರಕ್ಕಾಗಿ ಬಾಂಬೆಯಿಂದ ಓಡೋಡಿ ಬಂದ ಬಸವರಾಜ್ ಅವರು, ಈ ನಾಡಿನ ಜನತೆಗೆ ಸಾಕಷ್ಟು ಅನುಕೂಲ ಮಾಡಿಕೊಟ್ಟಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬಗ್ಗೆ ಮಾತನಾಡಲು ನೈತಿಕತೆ ಇದೆಯಾ ? ಎಂಬ ಬಗ್ಗೆ ತಮ್ಮನ್ನು ತಾವು ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ಸಲಹೆ ನೀಡಿದ್ದಾರೆ.

ಜಿಲ್ಲಾಡಳಿತವು ಅನೇಕ ದೇಶಗಳ ಆರೋಗ್ಯ ಇಲಾಖೆ ಪರಿಚಯವಿರುವ ಶಾಮನೂರು ಮಲ್ಲಿಕಾರ್ಜುನ್ ಅವರ ಮಾರ್ಗದರ್ಶನ ಪಡೆದುಕೊಂಡು ಹೋದಲ್ಲಿ ಜಿಲ್ಲೆಯಲ್ಲಿ ಕೊರೊನಾವನ್ನು ತಡೆಗಟ್ಟಲು ಸಾಧ್ಯವಿದೆ ಎಂದು ಅಭಿಪ್ರಾಯಪಟ್ಟಿರುವ ಅವರು ಜಿಲ್ಲಾಡಳಿತ ಮಲ್ಲಿಕಾರ್ಜುನ್ ಅವರ ಮಾರ್ಗದರ್ಶನ, ಸಲಹೆ-ಸೂಚನೆಯನ್ನು ಪಾಲಿಸಲಿ ಎಂದು ಆಗ್ರಹಿಸಿದ್ದಾರೆ.

ಕಳೆದ ವರುಷ ಕೊರೊನಾ ಆರಂಭದ ವೇಳೆಯೇ ಮಲ್ಲಿಕಾರ್ಜುನ್ ಅವರು, ಜಿಲ್ಲಾಡಳಿತಕ್ಕೆ ಅನೇಕ ಸಲಹೆಗಳನ್ನು ನೀಡಿದ್ದರು. ಆದರೆ, ಜಿಲ್ಲಾಡಳಿತ ನಿರ್ಲಕ್ಷ್ಯ ವಹಿಸಿದ್ದರಿಂದ ಇಂದು ಅನೇಕ ಸಂಕಷ್ಟಗಳನ್ನು ಎದುರಿಸಬೇಕಾಗಿದೆ. ಇನ್ನು ಕಾಲ ಮಿಂಚಿಲ್ಲ. ಮಲ್ಲಿಕಾರ್ಜುನ್ ಅವರು ಮಾಧ್ಯಮಗಳಿಗೆ ನೀಡಿರುವ ಸಲಹೆಯನ್ನು ಜಿಲ್ಲಾಡಳಿತ ಪರಿಗಣಿಸಿದರೆ, ಈಗಲೂ ಜಿಲ್ಲೆಯನ್ನು ಕೊರೊನಾದಿಂದ ಮುಕ್ತ ಮಾಡಬಹುದು ಎಂದು ತಿಳಿಸಿದ್ದಾರೆ.

# ಶೇ.84ರಷ್ಟು ಲಸಿಕೆ ವಾಣಿಜ್ಯ ರಫ್ತು ಅನುಮತಿಗಾಗಿ : ಬಿಜೆಪಿ

ನವದೆಹಲಿ, ಮೇ 12 – ಲಸಿಕೆ ಯೋಜನೆಯ ಬಗ್ಗೆ ಕಾಂಗ್ರೆಸ್ ಹಾಗೂ ಆಮ್ ಆದ್ಮಿ ಪಾರ್ಟಿಗಳು ಅಪಪ್ರಚಾರ ಮಾಡುತ್ತಿವೆ ಎಂದು ಹೇಳಿರುವ ಬಿಜೆಪಿ, ವಿದೇಶಕ್ಕೆ ಕಳಿಸಲಾದ ಶೇ.84ರಷ್ಟು ಲಸಿಕೆಗಳು ವಾಣಿಜ್ಯ ಹಾಗೂ ಅನುಮತಿ ಒಪ್ಪಂದದ ಭಾಗವಾಗಿವೆ ಎಂದು ಹೇಳಿದೆ.

ಆನ್‌ಲೈನ್ ಮೂಲಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ವಕ್ತಾರ ಸಂಬಿತ್ ಪಾತ್ರ, 1.07 ಕೋಟಿ ಲಸಿಕೆಗಳನ್ನು ವಿದೇಶಕ್ಕೆ ಕಳಿಸಲಾಗಿದೆ. ಇದರಲ್ಲಿ 78.5 ಲಕ್ಷಗಳನ್ನು ಏಳು ನೆರೆ ದೇಶಗಳಿಗೆ ನೀಡಲಾಗಿದೆ. ನೆರೆ ದೇಶಗಳು ಸುರಕ್ಷಿತವಾಗಿರುವುದು ಭಾರತದ ಹಿತದಲ್ಲಿದೆ ಎಂದಿದ್ದಾರೆ.

ಎರಡು ಲಕ್ಷ ಡೋಸ್‌ಗಳನ್ನು ವಿಶ್ವ ಸಂಸ್ಥೆಯ ಶಾಂತಿಪಾಲನಾ ಪಡೆಗಳಿಗೆ ನೀಡಲಾಗಿದ್ದು, ಇಲ್ಲಿ 6,600 ಭಾರತೀಯ ಸೈನಿಕರು ನಿಯೋಜಿತರಾಗಿದ್ದಾರೆ ಎಂದು ಪಾತ್ರ ತಿಳಿಸಿದ್ದಾರೆ. ಭಾರತದಿಂದ 6.63 ಕೋಟಿ ಲಸಿಕೆ ರಫ್ತು ಮಾಡಲಾಗಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಆಮ್ ಆದ್ಮಿ ಪಾರ್ಟಿಗಳು ಅಪಪ್ರಚಾರ ಮಾಡುತ್ತಿದ್ದಾರೆ ಎಂದವರು ಆಕ್ಷೇಪಿಸಿದ್ದಾರೆ.

5.50 ಕೋಟಿ ಲಸಿಕೆಗಳನ್ನು ಎರಡು ಭಾರತೀಯ ಕಂಪನಿಗಳು ರಫ್ತು ಮಾಡುವುದು ವಾಣಿಜ್ಯ ಹಾಗೂ ಅನುಮತಿ ಬದ್ಧತೆಯಾಗಿತ್ತು ಎಂದವರು ತಿಳಿಸಿದ್ದಾರೆ.

ಕೋವಿಶೀಲ್ಡ್‌ನ ಬೌದ್ಧಿಕ ಹಕ್ಕುಗಳ ಕುರಿತು ಪ್ರಸ್ತಾಪಿಸಿರುವ ಅವರು, ಅಸ್ಟ್ರಾಜೆನೆಕಾದಿಂದ ಅನುಮತಿ ಪಡೆದು ಭಾರತದ ಎಸ್.ಐ.ಐ. ಲಸಿಕೆ ಉತ್ಪಾದಿಸಿತ್ತು. ಇದರ ಒಂದು ಭಾಗವನ್ನು ನಿಯಮಗಳ ಪ್ರಕಾರ ರಫ್ತು ಮಾಡಲೇಬೇಕಿತ್ತು ಎಂದಿದ್ದಾರೆ.

ಲಸಿಕೆ ಉತ್ಪಾದಿಸಲು ಅಗತ್ಯವಾದ ಕಚ್ಚಾ ವಸ್ತುಗಳನ್ನು ತರಿಸಲು ಮಾಡಿಕೊಳ್ಳಲಾದ ಒಪ್ಪಂದದ ಪ್ರಕಾರ ರಫ್ತು ಅನಿವಾರ್ಯವಾಗಿತ್ತು. ಭಾರತೀಯರನ್ನು ಕಡೆಗಣಿಸಿ ಲಸಿಕೆ ರಫ್ತು ಮಾಡಲಾಗುತ್ತಿದೆ ಎಂಬುದು ಅಪಪ್ರಚಾರ ಎಂದವರು ತಿಳಿಸಿದ್ದಾರೆ.

ಜಾಗತಿಕ ಯುಗದಲ್ಲಿ ಯಾವ ದೇಶವೂ ದ್ವೀಪವಾಗಿರಲು ಸಾಧ್ಯವಿಲ್ಲ. ಸಹಕಾರದ ಜಾಗತೀಕರಣ ಇರಲೇಬೇಕಿದೆ ಎಂದು ಪಾತ್ರ ಹೇಳಿದ್ದಾರೆ. ಲಸಿಕೆ ಉತ್ಪಾದನೆ ಹೆಚ್ಚಿಸುವ ಕುರಿತು ಮಾತನಾಡಿರುವ ಅವರು, ಎಸ್.ಐ.ಐ. ಲಸಿಕೆ ಉತ್ಪಾದನೆಗೆ ಅಸ್ಟ್ರಾಜೆನೆಕಾದಿಂದ ಅನುಮತಿ ಪಡೆದಿದೆ. ಇದನ್ನು ಬೇರೆಯವರಿಗೆ ಹಸ್ತಾಂತರಿಸಲು ಸಾಧ್ಯವಾಗದು. ಭಾರತ್ ಬಯೋಟೆಕ್‌ನ ಕೊವ್ಯಾಕ್ಸಿನ್ ಲಸಿಕೆ ಉತ್ಪಾದಿಸಲು ಉನ್ನತ ಹಂತದ ಜೈವಿಕ ಸುರಕ್ಷತೆ ಬೇಕಿದ್ದು, ಇದು ಕೆಲವೇ ಕಂಪನಿಗಳ ಬಳಿ ಲಭ್ಯವಿದೆ. ಆ ಕಂಪನಿಗಳ ಜೊತೆ ಮಾತುಕತೆ ನಡೆಯುತ್ತಿದೆ ಎಂದು ಹೇಳಿದ್ದಾರೆ.

## ತರಳಬಾಳು ಶ್ರೀಗಳ ಕಾರ್ಯಕ್ಕೆ ಶಾಸಕ ಪ್ರೊ. ಲಿಂಗಣ್ಣ ಶ್ಲಾಘನೆ




ದಾವಣಗೆರೆ, ಮೇ 13 - ತರಳಬಾಳು ಸೇವಾ ಸಮಿತಿ ಎಸ್.ಎಸ್. ಕಲ್ಯಾಣ ಮಂಟಪದಲ್ಲಿ ಪ್ರತಿ ದಿನ ನಡೆಯುತ್ತಿರುವ ಕೊರೊನಾ ರೋಗಿಗಳಿಗೆ ಉಚಿತ ಪ್ರಸಾದ ವ್ಯವಸ್ಥೆ ನಡೆಯುವ ಸ್ಥಳಕ್ಕೆ ಇಂದು ಭೇಟಿ ನೀಡಿದ ಶಾಸಕರು, ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ತರಳಬಾಳು ಸೇವಾ ಸಮಿತಿ, ಶಿವಸೈನ್ಯ ತಂಡಕ್ಕೆ ಮತ್ತು ದಾವಣಗೆರೆ ಜನತೆಗೆ ಶಾಸಕ ಪ್ರೊ ಲಿಂಗಣ್ಣ ಅಭಿನಂದನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಬಯಲು ಸೀಮೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಣಬೇರು ಜೀವನ ಮೂರ್ತಿ, ಶ್ರೀನಿವಾಸ ದಾಸಕರಿಯಪ್ಪ, ಗೌರವಾಧ್ಯಕ್ಷರಾದ ಶಶಿಧರ್ ಹೆಮ್ಮನಬೇತೂರು, ಉಮೇಶ್‌ಗೌಡ್ರು ಮಾಗನೂರು, ಲಿಂಗರಾಜ್ ಅಗಸನಕಟ್ಟೆ, ಸತೀಶ್ ಸಿರಿಗೆರೆ, ಶ್ರೀನಿವಾಸ್ ಮೆಳ್ಳೇಕಟ್ಟೆ, ಪ್ರಭು ಕಾವಲಹಳ್ಳಿ, ಶಿವಕುಮಾರ್ ಕೊರಟಿಕೆರೆ, ಬಿಸಲೇರಿ ಜಗದೀಶ್, ಮತ್ತಿತರರು ಉಪಸ್ಥಿತರಿದ್ದರು.

## ಜಕಾತಿ ವಸೂಲಾತಿ ಬಗ್ಗೆ ಕ್ರಮ



ದಾವಣಗೆರೆ,ಮೇ 12- ನಗರದ ಬೀದಿ ಬದಿ ವ್ಯಾಪಾರಿಗಳಿಂದ ಜಕಾತಿ ವಸೂಲಾತಿಯ ಅವಧಿ ಮುಗಿದಿದ್ದರೂ, ಕೆಲವರು ಜಕಾತಿ ವಸೂಲಾತಿ ಮಾಡುತ್ತಿರುವ ಬಗ್ಗೆ ದೂರುಗಳು ಬಂದಿದ್ದು, ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಮಹಾನಗರ ಪಾಲಿಕೆಯ ತೆರಿಗೆ ನಿರ್ಧಾರಣೆ, ಹಣಕಾಸು ಮತ್ತು ಮೇಲ್ಮನವಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀಮತಿ ರೇಣುಕಾ ಶ್ರೀನಿವಾಸ್ ಅವರು ಎಚ್ಚರಿಸಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಬೀದಿ ಬದಿ ವ್ಯಾಪಾರಿಗಳು ಯಾವುದೇ ಕಾರಣಕ್ಕೂ ಯಾರಿಗೂ ಜಕಾತಿ ಕಟ್ಟಬಾರದು. ಒಂದು ವೇಳೆ ಒತ್ತಡ ಬಂದಲ್ಲಿ ತಮಗಾಗಲೀ, ಮೇಯರ್, ಆಯುಕ್ತರಿಗಾಗಲೀ, ಹತ್ತಿರದ ಪೊಲೀಸ್ ಠಾಣೆಗಾಗಲೀ ದೂರು ನೀಡುವಂತೆ ತಿಳಿಸಿದ್ದಾರೆ.

# ಯಾರ್ರೀ ರೋಗಿಗೆ ಆಕ್ಸಿಜನ್, ಔಷಧಿ ತರಲಿಕ್ಕೆ ಹೇಳಿದ್ದು...

ದಾವಣಗೆರೆ, ಮೇ 12- 'ಯಾರ್ರೀ ರೋಗಿಗೆ ಹೊರಗಡೆಯಿಂದ ಆಕ್ಸಿಜನ್ ತರಲಿಕ್ಕೆ ಹೇಳಿದ್ದಾರಂತೆ. ಔಷಧಿಯನ್ನು ಸಹ ತೆಗೆದುಕೊಂಡು ಬರುವಂತೆ ರೋಗಿಗಳ ಸಂಬಂಧಿಕರಿಗೆ ಹೇಳುತ್ತಿದ್ದಾರಂತೆ. ಅದೇನ್ರೀ ನೋಡ್ರಿ'

ಹೀಗಂತ ಸಂಸದ ಜಿ. ಎಂ. ಸಿದ್ದೇಶ್ವರ್ ಅವರು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಸೂಚನೆ ನೀಡಿದರು.

ಜಿಲ್ಲಾ ವರದಿಗಾರರ ಕೂಟಕ್ಕೆ ಇಂದು ಪತ್ರಕರ್ತ ಮಿತ್ರರಿಗೆ ಕೋವಿಡ್ ಲಸಿಕಾಕರಣಕ್ಕೆ ಆಗಮಿಸಿದ ವೇಳೆ ಕೂಟದ ಕೆಳ ಆವರಣದಲ್ಲಿ ಸಿದ್ದೇಶ್ವರ ಅವರು ಸುಚೇತನ ಆಸ್ಪತ್ರೆಯಲ್ಲಿ ಈ ರೀತಿ ಮಾಡಿದ್ದಾರಂತೆ ಎಂದು ಜಿಲ್ಲಾಧಿಕಾರಿ



ಮಹಾಂತೇಶ್ ಬೀಳಗಿ ಅವರನ್ನು ಪ್ರಶ್ನೆ ಮಾಡಿದರು.

ಆಗ ಜಿಲ್ಲಾಧಿಕಾರಿಗಳು ಪ್ರತಿಕ್ರಿಯಿಸುತ್ತಾ, ಹಾಗೆ ಮಾಡಿದ್ದರೆ ತಪ್ಪು ಸರ್. ಈ ಬಗ್ಗೆ ಪರಿಶೀಲನೆ ನಡೆಸ್ತೇನೆ. ಆಕ್ಸಿಜನ್ ಅವಶ್ಯಕತೆ ಇದ್ದರೆ ಪೂರೈಸುತ್ತೇವೆ ಎಂದು ಹೇಳಿದರು.

**ಡಿಸಿಗೆ ಕೈಗಾರಿಕಾ ಸಚಿವರ ಫೋನ್:** ಇದೇ ವೇಳೆ ಕೈಗಾರಿಕಾ ಸಚಿವ ಜಗದೀಶ್

### ಜಿಲ್ಲಾಧಿಕಾರಿ ಬಳಿ ಸಂಸದ ಸಿದ್ದೇಶ್ವರ ಅಸಮಾಧಾನ

ಶೆಟ್ಟರ್ ಅವರು ಜಿಲ್ಲಾಧಿಕಾರಿ ಅವರ ಮೊಬೈಲ್‌ಗೆ ಕರೆ ಮಾಡಿ, ಜಿಲ್ಲೆಯಲ್ಲಿ ಆಕ್ಸಿಜನ್ ಎಷ್ಟಿದೆ ಎಂಬ ಬಗ್ಗೆ ಮಾಹಿತಿ ಪಡೆದುಕೊಂಡರು. ಜಿಲ್ಲೆಯಲ್ಲಿ ಕೊರೊನಾ ಸಂಖ್ಯೆ ಹೆಚ್ಚಾಗುತ್ತಿದೆ.

ಆಮ್ಲಜನಕ ಬೇಡಿಕೆ ಹೆಚ್ಚಿದೆ. ದಿನಕ್ಕೆ 14 ಕೆ.ಎಲ್. ಮಾತ್ರ ಇದೆ. 20 ಕೆ.ಎಲ್. ನ ಅವಶ್ಯಕತೆ ಇದೆ. ಈಗಾಗಲೇ ಸಂಬಂಧಪಟ್ಟವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದಷ್ಟು ಬೇಗ ಪೂರೈಕೆ ಮಾಡಿ ಎಂದು ಜಿಲ್ಲಾಧಿಕಾರಿಗಳು ಮನವಿ ಮಾಡಿದರು.

ಪಕ್ಕದಲ್ಲೇ ಇದ್ದ ಸಿದ್ದೇಶ್ವರ್ ಅವರು ಜಗದೀಶ್ ಶೆಟ್ಟರ್ ಅವರೊಂದಿಗೆ ಮಾತನಾಡುತ್ತಾ, ಮಂಗಳವಾರ ಮೆಸೇಜ್ ಮಾಡಿದ್ದೇನೆ. ದಯವಿಟ್ಟು ಆಕ್ಸಿಜನ್ ನೀಡಿ. ಎಕ್ಸ್‌ಪ್ರೆಸ್ ಆಕ್ಸಿಜನ್ ವ್ಯವಸ್ಥೆ ಮಾಡಲಾಗಿದೆ.

ಇದರಲ್ಲಿಯಾದರೂ ಕಳುಹಿಸಿಕೊಡಿ. ನಮ್ಮಲ್ಲಿದ್ದ ಲಭ್ಯತೆ ಆಧಾರದಲ್ಲಿ ಈಗ ಹೇಗೋ ಸಂಬಾಳಿಸಲಾಗುತ್ತಿದೆ.

ಆದಷ್ಟು ಬೇಗ ಆಮ್ಲಜನಕವನ್ನು ದಾವಣಗೆರೆಗೆ ಪೂರೈಕೆ ಮಾಡಿ ಎಂದು ಮನವಿ ಮಾಡಿದರು.

## ನಿಟ್ಟುವಳ್ಳಿಯ ಇಎಸ್‌ಐ ಆಸ್ಪತ್ರೆಗೆ ಸಂಸದ ಸಿದ್ದೇಶ್ವರ ಭೇಟಿ



ದಾವಣಗೆರೆ, ಮೇ 12- ನಗರದ ನಿಟ್ಟುವಳ್ಳಿ ರಸ್ತೆಯಲ್ಲಿರುವ ಇಎಸ್‌ಐ ಆಸ್ಪತ್ರೆಗೆ ಇಂದು ಸಂಸದ ಜಿ.ಎಂ. ಸಿದ್ದೇಶ್ವರ ಅವರು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳ ಜೊತೆಗೆ ತೆರಳಿ ಪರಿಶೀಲಿಸಿದರು.

ಇಎಸ್‌ಐ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿ 50 ಆಕ್ಸಿಜನ್ ಬೆಡ್‌ಗಳ ವ್ಯವಸ್ಥೆ ಮಾಡಿರುವುದನ್ನು

### 50 ಆಕ್ಸಿಜನ್ ಬೆಡ್‌ಗಳ ವ್ಯವಸ್ಥೆ ಪರಿಶೀಲನೆ

ಪರಿಶೀಲಿಸಿ, ಇಂದಿನಿಂದಲೇ ರೋಗಿಗಳನ್ನು ಅಲ್ಲಿಗೆ ಸ್ಥಳಾಂತರಿಸಬಹುದೆಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಡಿಹೆಚ್‌ಓ ಡಾ. ನಾಗರಾಜ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ರಾಘವನ್, ಆರ್ ಸಿಹೆಚ್ ಓ ಡಾ. ಮೀನಾಕ್ಷಿ, ಡಾ. ಮುರಳೀಧರ ಸೇರಿದಂತೆ ಇತರರು ಇದ್ದರು.


## ನಾಳೆ ರಂಜಾನ್ ಆಚರಣೆ

ದಾವಣಗೆರೆ ಮೇ 12- ದೇಶಾದ್ಯಂತ ಎಲ್ಲಿಯೂ ಸಹ ಚಂದ್ರ ಗೋಚರದ ಮಾಹಿತಿ ಲಭ್ಯವಾಗದ ಕಾರಣ ನಾಡಿದ್ದು ದಿನಾಂಕ 14 ರ ಶುಕ್ರವಾರ ರಂಜಾನ್ ಹಬ್ಬ ಆಚರಿಸಲು ಉಲೇಮಾಗಳು ಇಂದು ಸಭೆ ಸೇರಿ ತೀರ್ಮಾನಿಸಿದ್ದಾರೆ.

ನಗರದ ತಂಜೀಮ್ ಕಛೇರಿಯಲ್ಲಿ ಮೌಲಾನ ಮಹಮ್ಮದ್ ಹನೀಫ್ ರಜಾ ಅವರ ಅಧ್ಯಕ್ಷತೆಯಲ್ಲಿ ನಡೆದ ಇಂದಿನ ಸಭೆಯಲ್ಲಿ ಸ್ಥಳೀಯ ವಿವಿಧ ಮಸೀದಿಗಳ ಮೌಲಾನರು ಪಾಲ್ಗೊಂಡಿದ್ದರು. ಮುವತ್ತು ರೋಜಾಗಳು ಇಂದಿಗೆ ಮುಕ್ತಾಯಗೊಳ್ಳಲಿವೆ, ವಿಧಾನ ಪರಿಷತ್ ಮಾಜಿ ಸದಸ್ಯ ಅಬ್ದುಲ್ ಜಬ್ಬಾರ್ ಸೇರಿದಂತೆ ಸಲಹಾ ಸಮಿತಿ ಪದಾಧಿಕಾರಿಗಳು ಉಪಸ್ಥಿತರಿದ್ದರು.


ನಾಳೆ ಶುಭ ಶುಕ್ರವಾರದಂದು ಒಟ್ಟಾಗಿ ಆಚರಿಸಲ್ಪಡುವ ರಂಜಾನ್ ಮತ್ತು ಬಸವ ಜಯಂತಿ ಹಬ್ಬದ ಹಾರ್ದಿಕ ಶುಭಾಶಯಗಳು





ಶಬ್ಬೆ- ಮೇರಾಜ್, ಶಿವರಾತ್ರಿ ಜೊತೆಯಲಿ
ಯುಗಾದಿ, ರಂಜಾನ್ ಉಪವಾಸದ ಚಂದ್ರದರ್ಶನ ಜೊತೆ ಜೊತೆಯಲಿ
ರಂಜಾನ್ ಬಸವ ಜಯಂತಿ ಹಬ್ಬಗಳ ಆಚರಣೆ ಜೊತೆ ಜೊತೆಯಲಿ
ಸಮಸ್ತರೆಲ್ಲರಿಗೂ'ಜೋಡಿ ಹಬ್ಬದ' ಶುಭಾಶಯಗಳು.

ಗತಿಸಿದ ವರ್ಷದ ಕೋವಿಡ್ ಸಂದರ್ಭದಿಂದಲೂ ಪ್ರತಿಯೊಬ್ಬರ ಕಷ್ಟಗಳಲ್ಲಿ ನೆರಳಿನಂತೆ ಕಾರ್ಯನಿರ್ವಹಿಸುತ್ತಾ, ಪ್ರತಿ ಸಮಾಚಾರವನ್ನು ನಮ್ಮ ಕಣ್ಣರೆಪ್ಪೆಗಳ ಮೇಲೆ ಮೂಡುವಂತೆ ಮುದ್ರಿಸಿದ ಪತ್ರಿಕಾ ಮಾಧ್ಯಮಕ್ಕೆ ಮತ್ತು ಪ್ರತಿಯೊಬ್ಬ ಕಾರ್ಯಕರ್ತರಿಗೆ ಕೃತಜ್ಞತಾ ಪೂರ್ವಕ ಅಭಿನಂದನೆಗಳು.



ಕೆ. ಸಿರಾಜ್ ಅಹಮ್ಮದ್
ಜಿಲ್ಲಾ ಕ.ಸಾ.ಪ. ಸಂಚಾಲಕರು
ಜಿಲ್ಲಾ ವಕ್ಫ್ ಬೋರ್ಡ್ ಉಪಾಧ್ಯಕ್ಷರು,
ಸಂತೇಬೆನ್ನೂರು.


## ಪೆಟ್ರೋಲ್, ಡೀಸೆಲ್ ಬೆಲೆ ಮತ್ತೆ ಏರಿಕೆ

ನವದೆಹಲಿ, ಮೇ 12 - ಬುಧವಾರ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳು ಮತ್ತೆ ಏರಿಕೆಯಾಗಿದ್ದು, ಭೂಪಾಲ್ ಹಾಗೂ ಇಂದೋರ್‌ಗಳಲ್ಲಿ ಮೊದಲ ಬಾರಿಗೆ ಪೆಟ್ರೋಲ್ ಬೆಲೆ 100 ರೂ.ಗಳ ಗಡಿ ದಾಟಿದೆ.

ದೇಶಾದ್ಯಂತ ಪೆಟ್ರೋಲ್ ಹಾಗೂ ಡೀಸೆಲ್‌ಗಳ ಬೆಲೆ ದಾಖಲೆಗಳ ಗಡಿ ದಾಟುತ್ತಿದೆ. ಈ ವಾರದಲ್ಲಿ ಸತತ ಮೂರನೇ ಬಾರಿ ಹಾಗೂ ಮೇ 4ರ ನಂತರ ಏಳನೇ ಬಾರಿ ತೈಲ ಬೆಲೆ ಏರಿಕೆಯಾಗಿದೆ.

## 1.50 ಲಕ್ಷ ಆಕ್ಸಿಕೇರ್ ಉಪಕರಣ ಖರೀದಿಗೆ ನಿರ್ಧಾರ

ನವದೆಹಲಿ, ಮೇ 12 –ರಕ್ಷಣಾ ಸಂಶೋಧನಾ ಸಂಸ್ಥೆಯಾದ ಡಿ.ಆರ್.ಡಿ.ಒ. ಅಭಿವೃದ್ಧಿ ಪಡಿಸಿರುವ 1.50 ಲಕ್ಷ 'ಆಕ್ಸಿಕೇರ್' ಉಪಕರಣಗಳನ್ನು ಖರೀದಿಸಲು ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಇದು ಕೊರೊನಾ ರೋಗಿಗಳ ಚಿಕಿತ್ಸೆಗೆ ನೆರವಾಗಲಿದೆ.

ಆಕ್ಸಿಜನ್ ಸ್ಯಾಚುರೇಷನ್ ಅಳೆದು, ಅದರ ಆಧಾರದ ಮೇಲೆ ಕೊರೊನಾ ರೋಗಿಗಳಿಗೆ ಆಕ್ಸಿಜನ್ ಪೂರೈಸಲು ಈ ಉಪಕರಣ ನೆರವಾಗುತ್ತದೆ. ಈ ತಂತ್ರಜ್ಞಾನವನ್ನು ಹಲವಾರು ಉದ್ಯಮಗಳ ಜೊತೆ ಹಂಚಿಕೊಳ್ಳಲಾಗಿದ್ದು, ಇವುಗಳನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಲಾಗುತ್ತಿದೆ.

ಪಿಎಂ-ಕೇರ್ಸ್ ನಿಧಿಯ ಮೂಲಕ ಆಕ್ಸಿಕೇರ್‌ಗಳನ್ನು 322.5 ಕೋಟಿ ರೂ. ವೆಚ್ಚದಲ್ಲಿ ಖರೀದಿಸಲಾಗುವುದು. 50 ಸಾವಿರ ಸ್ವಯಂ ಚಾಲಿತ ಹಾಗೂ ಒಂದು ಲಕ್ಷ ನಿರ್ವಹಿಸಬಹುದಾದ ಉಪಕರಣಗಳನ್ನು ಖರೀದಿಸಲಾಗುವುದು.

ಆಕ್ಸಿಜನ್ ಮಟ್ಟ ಕುಸಿಯದಂತೆ, ಈ ಉಪಕರಣ ಅಗತ್ಯ ಮಟ್ಟದಲ್ಲಿ ಅನಿಲವನ್ನು ಪೂರೈಸುತ್ತದೆ. ಡಿ.ಆರ್.ಡಿ.ಒ.ದ ಬೆಂಗಳೂರಿನ ಘಟಕವಾದ ಡೆಬೆಲ್, ಈ ಉಪಕರಣವನ್ನು ರೂಪಿಸಿದೆ. ಪರ್ವತದ ಉನ್ನತ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುವ ಸೈನಿಕರ ರಕ್ಷಣೆಗಾಗಿ ಈ ಉಪಕರಣವನ್ನು ರೂಪಿಸಲಾಗಿತ್ತು.

## 44 ದೇಶಗಳಲ್ಲಿ ಭಾರತದ ಕೊರೊನಾ ರೂಪಾಂತರಿ

ನವದೆಹಲಿ, ಮೇ 12 – ಭಾರತದಲ್ಲಿ ಮೊದಲು ಗುರುತಿಸಲಾದ ಬಿ.1.617 ಕೊರೊನಾ ರೂಪಾಂತರಿ 44 ದೇಶಗಳಲ್ಲಿ ಕಂಡು ಬಂದಿದೆ ಎಂದು ವಿಶ್ವ ಆರೋಗ್ಯ ಸಂಘಟನೆ ತಿಳಿಸಿದೆ. ಈ ರೂಪಾಂತರಿ ಕಳವಳ ತರುವಂಥದ್ದಾಗಿದೆ ಎಂದು ಸಂಘಟನೆ ತಿಳಿಸಿತ್ತು.

ಮೇ 11ರಂದು 44 ದೇಶಗಳಲ್ಲಿ ಈ ರೂಪಾಂತರಿ ಕಂಡು ಬಂದಿದೆ ಎಂದು ಡಬ್ಲ್ಯೂ.ಹೆಚ್.ಒ. ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಈ ರೂಪಾಂತರಿ ಮೂಲ ವೈರಸ್‌ಗಿಂತ ವೇಗವಾಗಿ ಹರಡುತ್ತಿದೆ.

## ಬಾಪೂಜಿ ಕೋವಿಡ್ ಸಹಾಯವಾಣಿ ಡೆಸ್ಕ್ ಆರಂಭ

ದಾವಣಗೆರೆ, ಮೇ 12- ದಿನದಿಂದ ದಿನಕ್ಕೆ ಕೋವಿಡ್ ರೋಗಿಗಳ ಸಂಖ್ಯೆ ಹೆಚ್ಚುತ್ತಾ ಎಷ್ಟೋ ರೋಗಿಗಳ ಸಂಬಂಧಿಕರು ಆಸ್ಪತ್ರೆಯಿಂದ ಆಸ್ಪತ್ರೆಗಳಿಗೆ ಅಲೆಯುತ್ತಿರುವುದು ಈಗ ಸರ್ವೇ ಸಾಮಾನ್ಯ, ಇದನ್ನು ಮನಗಂಡು ನಗರದ ಬಾಪೂಜಿ ಆಸ್ಪತ್ರೆಯಲ್ಲಿ ಹೆಲ್ಪ್ ಡೆಸ್ಕ್ ಪ್ರಾರಂಭಿಸಿದ್ದು ಇಲ್ಲಿಗೆ ಕರೆ ಮಾಡಿದವರಿಗೆ ಚಿಕಿತ್ಸೆಗೆ ಸಂಬಂಧಪಟ್ಟ ಎಲ್ಲಾ ಮಾಹಿತಿ ಹಾಗೂ ಹಾಸಿಗೆ ವ್ಯವಸ್ಥೆಯ ವಿವರಗಳನ್ನೂ ಪಡೆಯಬಹುದು.

ಈ ಹೆಲ್ಪ್ ಡೆಸ್ಕ್ ದಿನದ 24 ಗಂಟೆಯೂ ಕಾರ್ಯ ನಿರ್ವಹಿಸಲಿದ್ದು, ಆತಂಕದಲ್ಲಿ ಇರುವವರಿಗೆ ಇದರ ಸದುಪಯೋಗವಾಗಲಿದೆ. ನೀವು ಇದ್ದ ಸ್ಥಳದಿಂದಲೇ ಈ ಕರೆ ಮಾಡಬಹುದಾಗಿದೆ. ನೋಡಲ್ ಆಫೀಸರ್ (6360789169) ಅಥವಾ ನರ್ಸಿಂಗ್ ಸೂಪರ್ ವೈಸರ್ (9113600663) ಅವರನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು.





ರಂಜಾನ್ ರೋಜಾ ಸಮಯ
ದಿನಾಂಕ 13.05.2021
ಇಫ್ತೇಯಾರಿ ಸಮಯ : 6-51





### ಕೈಲಾಸ ಸಮಾರಾಧನೆ



ದಾವಣಗೆರೆ ಸಿಟಿ ಕೆ.ಬಿ ಬಡಾವಣೆ 5ನೇ ಕ್ರಾಸ್ ವಾಸಿ ಶ್ರೀಯುತ ದರೂರ್ ಕಟ್ಟಿಮನಿ ಡಿ. ಹೆಚ್ ವೆಂಕಟೇಶ್ ಅವರ ಧರ್ಮಪತ್ನಿ ಶ್ರೀಮತಿ ರೇಖಾ ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು. ದಿನಾಂಕ 05-05-2021ರ ಬುಧವಾರ ಬೆಳಗ್ಗೆ 9.20 ಕ್ಕೆ ನನ್ನ ಪೂಜ್ಯ ಪತಿಯವರಾದ **ಶ್ರೀಯುತ ದರೂರು ಕಟ್ಟಿಮನಿ ಡಿ.ಹೆಚ್ ವೆಂಕಟೇಶ್** ಅವರು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಆತ್ಮಶಾಂತಿಗಾಗಿ ಕೈಲಾಸ ಸಮಾರಾಧನೆಯನ್ನು ದಿನಾಂಕ 13-05-2021 ರ ಗುರುವಾರ ಮಧ್ಯಾಹ್ನ 12.15ಕ್ಕೆ ದಾವಣಗೆರೆ ಸಿಟಿ ಕೆ.ಬಿ ಬಡಾವಣೆ 5ನೇ ಕ್ರಾಸಿನ ಮೃತರ ಸ್ವಗೃಹದಲ್ಲಿ ನಡೆಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: ಶ್ರೀಮತಿ ಬಿ. ರೇಖಾ ಮತ್ತು ಮಕ್ಕಳು ಹಾಗೂ ಮೊಮ್ಮಕ್ಕಳು.
ದರೂರ್ ಕಟ್ಟಿಮನಿ ವಂಶಸ್ಥರು ಹಾಗೂ ಸವಿತಾ ಸಮಾಜದ ಬಂಧು ಮಿತ್ರರು. ದೂ: 6361260681

### ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 12.5.2021ರಂದು ನಿಧನರಾದ ಶ್ರೀಮತಿ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಶಾಲೆಯ ನಿವೃತ್ತ ಶಿಕ್ಷಕರಾದ **ಶ್ರೀ ಹೆಚ್.ಎಸ್. ಶಿವಮೂರ್ತಪ್ಪ** ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

✦ ಶ್ರೀಮತಿ ಶ್ವೇತಾ ಮತ್ತು ಹೆಚ್. ನಾಗರಾಜ್
ಸದಸ್ಯರು, ಛೇರ್ಮನ್ ಕ್ಲಬ್, ಎಲ್.ಐ.ಸಿ. ಶಾಖೆ - 1 ದಾವಣಗೆರೆ.
✦ ಶ್ರೀಮತಿ ಅನುಶ್ರೀ ಮತ್ತು ಹೆಚ್.ಎನ್. ವೀರೇಶ್

### ನಾಗಮ್ಮ ಕಣಿವೆಪ್ಪರ್ ನಿಧನ



ದಾವಣಗೆರೆ ಸಿಟಿ ನಿಟುವಳ್ಳಿ ದುರ್ಗಾಂಬಿಕಾ ದೇವಸ್ಥಾನದ ಹಿಂಭಾಗದ ಉಪ್ಪಾರ ಬೀದಿ ವಾಸಿ, ದಿ|| ಕಣಿವೆಪ್ಪರ ಹನುಮಂತಪ್ಪನವರ ಧರ್ಮಪತ್ನಿ **ಶ್ರೀಮತಿ ನಾಗಮ್ಮ** ಅವರು ದಿನಾಂಕ 12.5.2021ರ ಬುಧವಾರ ರಾತ್ರಿ 9.30 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 76 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರಿಯರು, ಓರ್ವ ಪುತ್ರ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.5.2021ರ ಗುರುವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ಸಿಟಿ ಲೇಬರ್ ಕಾಲೋನಿಯ ಬೃಂದಾವನದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ, ಮೊ. : 98454 42573

|| ಶ್ರೀ ಮರುಳ ಸಿದ್ದೇಶ್ವರ ಪ್ರಸನ್ನ ||

### ಕೈಲಾಸ ಶಿವಗಣಾರಾಧನೆ ಆಹ್ವಾನ



ಜನನ 01.06.1957 — ಮರಣ 09.05.2021

**ಲಿಂಗೈಕ್ಯ ಶ್ರೀ ಹೆಚ್. ರೇವಣಸಿದ್ದಪ್ಪ ಆಲೂರು**

ದಾವಣಗೆರೆ ತಾಲ್ಲೂಕು ಆಲೂರು ಗ್ರಾಮದ ವಾಸಿ ಶ್ರೀಮತಿ ಸುನಂದಮ್ಮ ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 09.05.2021ನೇ ಭಾನುವಾರ ಬೆಳಿಗ್ಗೆ 11 ಗಂಟೆಗೆ ನನ್ನ ಪತಿಯವರಾದ **ಶ್ರೀ ಹೆಚ್. ರೇವಣಸಿದ್ದಪ್ಪನವರು** ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆಯನ್ನು** ದಿನಾಂಕ 13.05.2021ರ ಗುರುವಾರ ಬೆಳಿಗ್ಗೆ 11 ಗಂಟೆಗೆ ನಮ್ಮ ತೋಟದ ಮನೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

-: ಇಂತಿ ದುಃಖ ತಪ್ತರು :-
ಶ್ರೀಮತಿ ಸುನಂದಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು,
ಹಿತ್ತಲಮನಿ ವಂಶಸ್ಥರು ಹಾಗೂ ಬಂಧು-ಮಿತ್ರರು ಮತ್ತು ಆಲೂರು ಗ್ರಾಮಸ್ಥರು.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte